ಕನ್ನಡ ಸಾಹಿತ್ಯ ದರ್ಶನ ೧೯೫೭

ಶ್ರೀನಿವಾಸ ಹಾವನೂರ

ಪರಾಗ ಪ್ರಕಾಶನ, ಧಾರವಾಡ

ಕನ್ನಡ
ಸಾಹಿತ್ಯ ದರ್ಶನ
೧೯೫೬

ಶ್ರೀನಿವಾಸ ಹಾವನೂರ
ಮುಂಬಯಿ ಕನ್ನಡ ಸಾಹಿತ್ಯ ಕೂಟದ ಪರವಾಗಿ

ಮೇ ೧೯೫೭
ಬೆಲೆ ೧.೨೫

ಪರಾಗ ಪ್ರಕಾಶನ-ಧಾರವಾಡ

ಪರಿವಿಡಿ

★

ಪ್ರಕಾಶಕರು :
ಬೇಂದ್ರೆ ಲಕ್ಷ್ಮಣರಾಯರು
ಪರಾಗ ಪ್ರಕಾಶನ
ಧಾರವಾಡ

ಮುದ್ರಕರು :
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣ
ಧಾರವಾಡ

ನಿವೇದನೆ

ಕನ್ನಡ ಸಾಹಿತ್ಯ ದಿನದಿನಕ್ಕೆ ಬಹುಮುಖವಾಗಿ ಬೆಳೆಯುತ್ತಿದೆ, ನಿಜ. ಆದರೆ, ಎಲ್ಲಿ? ಯಾವಾಗ? ಎಂದಾಗ ಪತ್ರಿಕೆಗಳ 'ಸಾದರ ಸ್ವೀಕಾರ' ವಿಮರ್ಶೆಗಳತ್ತ ಕಣ್ಣು ಹೊರಳಿಸಬೇಕು. ಇಲ್ಲವೆ ಕೆಲವೇ ಜನರಿರುವ ವಿಮರ್ಶಕರ ಓದಿನ ನೆನಪಿನ ಮೊರೆ ಹೋಗಬೇಕು. ನಾವು ನಡೆದು ಬಂದ ದಾರಿಯನ್ನೇ ತಿರುಗಿ ನೋಡಲು, ಪತ್ರಿಕೆಗಳ ಶರಣು ಹೋಗುವುದು ಸಮರ್ಪಕವಾದ, ಶಾಸ್ತ್ರೀಯವಾದ ರೀತಿಯಲ್ಲ ಎಂಬ ಭಾವನೆಯೇ ನಮ್ಮ ಈ ಹೊತ್ತಿಗೆಯ ಪ್ರಕಟನೆಗೆ ಮುಖ್ಯ ಕಾರಣ. ಇಂಗ್ಲೀಷಿನಲ್ಲಿ 'ಬ್ರಿಟಿಶ್ ಕೌನ್ಸಿಲ್' ಪ್ರಕಟನೆಗಳಂತೆ ಮತ್ತು ಹೆಸರಾಂತ ಆಂಗ್ಲ ಪತ್ರಿಕೆಗಳ ಸಾಹಿತ್ಯ ಪುರವಣಿಗಳಂತೆ, ಕನ್ನಡದ ಸಾಹಿತ್ಯ ದರ್ಶನಕ್ಕೂ ಪ್ರಯತ್ನಿಸುವುದು ಆಗತ್ಯ. ಇಂಥ ಪ್ರಯತ್ನಕ್ಕೆ ಯಶಸ್ಸು ಸಿಗಬೇಕಾದುದೇ; ಎಂದೇ ನಾವು ಈ ಪ್ರಕಟನೆಗೆ ಕೈಹಾಕಿದ್ದೇವೆ.

ಆ ಪ್ರಕಾರ ಸಾಹಿತ್ಯ ಕೂಟವು ಕಳೆದ ವರ್ಷ ಒಂದು ಪತ್ರಿಕಾ ಪ್ರಕಟನೆಯನ್ನು ಹೊರಡಿಸಿ, ೧೯೫೬ರಲ್ಲಿ ಪ್ರಕಟವಾದ ಕನ್ನಡ ಸಾಹಿತ್ಯ ಸೃಷ್ಟಿಯ ಪರಿಚಯ ಮಾಡಿ ಕೊಡಬೇಕೆಂಬ ತನ್ನ ಯೋಜನೆಯನ್ನು ಲೇಖಕರು ಹಾಗೂ ಪ್ರಕಾಶಕರ ಮುಂದೆ ಇಟ್ಟಿತು. ಮತ್ತು ವಿಷಯ ಸಂಗ್ರಹವನ್ನು ಮಾಡುವುದಕ್ಕೆ ಸದಸ್ಯರಾದ ಶ್ರೀ. ಮ. ವಿ. ನಾಯಕ ಮತ್ತು ಶ್ರೀ. ಹಾವನೂರ ಶ್ರೀನಿವಾಸರು ಆರಂಭಿಸಿದರು. ಶ್ರೀ. ಹಾವನೂರರು ಮುಂಬಯಿಯನ್ನು ಬಿಟ್ಟು ಧಾರವಾಡಕ್ಕೆ ಹೋದಮೇಲೆ ಈ ಕೆಲಸವನ್ನು ಮುಂದುವರಿಸಿ ಮುಗಿಸಿದ್ದಾರೆ.

ಈ ಬಗೆಯ ಪುಸ್ತಕ ಕನ್ನಡಕ್ಕೆ ಅತಿ ಹೊಸತಾದುದಾದ್ದರಿಂದ, ಇದರ ಬಗೆಯನ್ನು ವಿವರಿಸುವುದು ಆಗತ್ಯವೆಂದು ತಿಳಿದಿದ್ದೇವೆ. ಇಲ್ಲಿ, ೧೯೫೬ರಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ವಿವರಗಳನ್ನು ಹತ್ತಾರು ಕಡೆಗಳಿಂದ ಕಲೆ ಹಾಕಲಾಗಿದೆ. ಅವುಗಳನ್ನು ಶಾಸ್ತ್ರೀಯ ರೀತಿಯಲ್ಲಿ ವರ್ಗೀಕರಿಸಿ, ಆಕಾರಾದಿಯಾಗಿ ಪುಸ್ತಕಗಳ ಹೆಸರುಗಳನ್ನೂ ಅವುಗಳ ಅತ್ಯಲ್ಪ ಪರಿಚಯವನ್ನೂ ಕೊಟ್ಟದ್ದಿದೆ. ವಿಸ್ತಾರ ಭಯದ ಮೂಲಕ ಈ ಪರಿಚಯ ಅತ್ಯಲ್ಪವಾಗಬೇಕಾಯಿತು.

ಈ ಗ್ರಂಥ ಸಂಗ್ರಹದಲ್ಲಿ ಪುನರ್ಮುದ್ರಣ ಪುಸ್ತಕಗಳನ್ನೂ ಅತಿ ಸಣ್ಣ ಪುಸ್ತಕಗಳನ್ನೂ ಬಿಟ್ಟಿದೆ. ಅದರಂತೆ ಪತ್ತೇದಾರೀ ಕಾದಂಬರಿಗಳನ್ನೂ, ಅತಿಯಾಗಿ ಅಶ್ಲೀಲವಿರುವ ಕೃತಿಗಳನ್ನೂ ಸೇರಿಸಿಲ್ಲ. ಚಿಕ್ಕಮಕ್ಕಳು ಅಥವಾ ಸಾಕ್ಷರತಾ ಪ್ರಸಾರಕ್ಕಾಗಿ ಬರೆದ ಪುಸ್ತಕಗಳನ್ನೂ ಬಿಟ್ಟದ್ದಿದೆ. ಇವಿಷ್ಟು ಉಳಿದು, ಕಳೆದ ವರ್ಷದ ಎಲ್ಲ ಕೃತಿಗಳ ಸಮಾವೇಶವಿಲ್ಲಿದೆ.

ಕನ್ನಡ ಪುಸ್ತಕಗಳ ಬಗ್ಗೆ ಒಂದೇ ಕಡೆಗೆ ಮಾಹಿತಿ ದೊರೆಯುವುದಿಲ್ಲ. ಯಾವುದೊಂದು ಪುಸ್ತಕಭಂಡಾರ ಇಲ್ಲವೆ ವ್ಯಾಪಾರಿಗಳಲ್ಲಿ ಕನ್ನಡದ ಎಲ್ಲ ಪುಸ್ತಕಗಳು

ದೊರೆಯುತ್ತವೆ ಎಂಬ ಭರವಸೆ ಇಲ್ಲ. ಇಂಥ ಅನಾನುಕೂಲ ಪರಿಸ್ಥಿತಿಯ ಮೂಲಕ, ಒಂದು ವರ್ಷದ ಎಲ್ಲ ಗ್ರಂಥಗಳನ್ನು ತಪ್ಪುಗಳಾಗದಂತೆ ಆಯುವುದಕ್ಕೆ ಸಂಕಲನ ಕಾರರಿಗೆ ೫-೬ ತಿಂಗಳುಗಳು ಹತ್ತಿದುವು. ಪುಸ್ತಕ ವ್ಯಾಪಾರಿಗಳಾದ ಹುಬ್ಬಳ್ಳಿಯ ಸಾಹಿತ್ಯ ಭಂಡಾರದವರೂ, ಮನೋಹರ ಗ್ರಂಥಭಂಡಾರದವರೂ ನೆರವಾದರೆಂದು ಕೆಲಸ ಹಗುರಾಯಿತು. ಅದರಂತೆ ಮುಂಬಯಿ ಕನ್ನಡ ಸಂಘದ ವಾಚನಾಲಯ, ಧಾರವಾಡದ ಪ್ರಾದೇಶಿಕ ಗ್ರಂಥಾಲಯ, ಕರ್ನಾಟಕ ವಿಶ್ವವಿದ್ಯಾನಿಲಯದ ಗ್ರಂಥಾಲಯ ಇವುಗಳಿಂದಲೂ ಮಾಹಿತಿ ಸಂಗ್ರಹಿಸಲಾಯಿತು. 'ಸಂಯುಕ್ತ ಕರ್ನಾಟಕ'ದ ವಾಚನಾಲಯದಿಂದ ಇನ್ನೆಲ್ಲೂ ಸುಲಭವಾಗಿ ದೊರೆಯಲಾಗದ ಪುಸ್ತಕಗಳು ನೋಡಲಿಕ್ಕೆ ದೊರೆತುವು.

ವೈಯಕ್ತಿಕವಾಗಿ ಕೆಲವು ಲೇಖಕರು, ಪ್ರಕಾಶಕರು ಮಾಹಿತಿಯನ್ನು ಪೂರೈಸಿದರು. ಅವರಿಗೂ ಮೇಲ್ಕಂಡ ಗ್ರಂಥಾಲಯಗಳಿಗೂ, ಪುಸ್ತಕ ವ್ಯಾಪಾರಿಗಳಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ. ಅದರಂತೆ ಪತ್ರಿಕಾಕರ್ತರು ಕೂಟದ ಯೋಜನೆಯನ್ನು ಪ್ರಚುರಗೊಳಿಸಿದ್ದಕ್ಕಾಗಿ ಅವರ ಆಭಾರವನ್ನೂ ಮನ್ನಿಸುತ್ತೇವೆ.

ಈ ಕೃತಿ ಬರೇ ಒಂದು ಆರಂಭ; ಅಷ್ಟೇ ನಮಗೆ ಹೆಮ್ಮೆ. ವರುವರುಷವೂ ಇದಕ್ಕೂ ಹೆಚ್ಚಿನ ವಿವರಗಳ ಗ್ರಂಥಗಳನ್ನು ಹೊರಡಿಸಬೇಕು, ಅದರಲ್ಲಿ ಪ್ರತಿಯೊಂದು ಸಾಹಿತ್ಯ ವಿಭಾಗದ ಕೂಲಂಕಷ ಸಮಾಲೋಚನೆ ನಡೆಯಬೇಕು, ತನ್ಮೂಲಕ ಕಾಲ ಕಾಲದ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ರೂಹಿಸಬೇಕು ಎಂಬುದು ನಮ್ಮ ಆಶಯವಾಗಿದೆ. ಹಾಗೆಯೇ ಓದುಗರ ಅಭಿರುಚಿ, ಒಲವು, ನಿಲವುಗಳ ಕುರಿತು ಶಾಸ್ತ್ರೀಯವಾಗಿ ಸಂಗ್ರಹಿಸಿದ ಮಾಹಿತಿಯನ್ನು ಈ ಪುಸ್ತಕದಲ್ಲೇ ಪ್ರಕಟಿಸಬೇಕು, ನಾಡಿನಲ್ಲಿ 'ಭೋಜ ಸಭೆ' (Book club)ಗಳ ಸ್ಥಾಪನೆಗೆ ಪ್ರೋತ್ಸಾಹ ಕೊಟ್ಟು ಅಂಥ ಸಭೆಗಳ ಆದರಕ್ಕೆ ಪಾತ್ರವಾದಂಥ ಕೃತಿಗಳ ಬಗೆಗೂ ಬರೆಯಬೇಕು ಎಂದೆಲ್ಲ ಹಿರಿಯಾಸೆಗಳು ನಮ್ಮ ಮುಂದೆ ಇವೆ. ಬರುವ ವರ್ಷಕ್ಕೆ ಇವೆಲ್ಲವನ್ನೂ ಮಾಡುತ್ತೇವೆಂಬ ಭರವಸೆಯನ್ನು ಇಲ್ಲಿ ಕೊಡುವುದಿಲ್ಲ. ಈ ಆಸೆಗಳು ಕಾರ್ಯರೂಪಕ್ಕೆ ಬರುವುದು, ಈ ಹೊತ್ತಿಗೆಯನ್ನು ಕನ್ನಡ ಬಾಂಧವರೂ, ಸಂಸ್ಥೆಗಳೂ ಸ್ವಾಗತಿಸುವ ಬಗೆಯನ್ನೇ ಹೊಂದಿಕೊಂಡಿದೆ.

೨ ವೆಂಕಟೇಶ ನಿವಾಸ
ಭಾವುದಾಜಿ ರೋಡ್,
ಮುಂಬಯಿ ೧೯

ಕನ್ನಡ ಸಾಹಿತ್ಯ ಕೂಟ

೧೯೫೬ರ ಕನ್ನಡ ಸಾಹಿತ್ಯರಚನೆ

ವೈಶಿಷ್ಟ್ಯಗಳು

೧೯೫೬ರಲ್ಲಿ ಸುಮಾರು ೪೨೫* ಗ್ರಂಥಗಳು ಪ್ರಕಟವಾಗಿವೆ. ಹೋದ ವರುಷಕ್ಕಿಂತ ಈ ಸಂಖ್ಯೆಯು ಸ್ವಲ್ಪ ಹೆಚ್ಚಿಗೆ ಇರಬೇಕು. ಇವುಗಳಲ್ಲಿ ಅನುವಾದಗಳು, ಪುನರ್ಮುದ್ರಣಗಳು ಇತ್ಯಾದಿಗಳನ್ನು ಬಿಟ್ಟರೆ, ಕನ್ನಡದಲ್ಲಿ ಮೌಲಿಕ ಸಾಹಿತ್ಯರಚನೆಯು ೩೦೦ ಗ್ರಂಥಗಳಲ್ಲಿ ಮಾತ್ರ ಕಂಡುಬರುತ್ತದೆ.

ಈ ವರ್ಷ ೭೦ ಅನುವಾದ ಗ್ರಂಥಗಳಿವೆ. ಇಂಗ್ಲೀಷಿನಿಂದ ೨೪, ಸಂಸ್ಕೃತದಿಂದ ೧೩, ಬಂಗಾಲಿಯಿಂದ ೧೧, ಹಿಂದೀ ೭, ಫ್ರೆಂಚ ೫ ಹೀಗೆ ಮುಖ್ಯವಾದ ಭಾಷೆಗಳ ಪ್ರಮಾಣವಿದೆ. ಅಮೇರಿಕೆಯ ಪ್ರಚಾರ ಶಾಖೆಯ ನೆರವನ್ನು ಪಡೆದು ಪ್ರಕಟಿತವಾದ ೬-೭ ಕೃತಿಗಳಿವೆ. ಅನ್ಯಭಾಷಿಕ ಲೇಖಕರಲ್ಲಿ ಅಗ್ರಗಣ್ಯರು, ಶ್ರೀ. ರವೀಂದ್ರನಾಥ ಠಾಕೂರರು. ಅವರ ೬ ಕೃತಿಗಳು ಈ ವರ್ಷ ಕನ್ನಡಕ್ಕೆ ಬಂದಿವೆ. ಅನುವಾದಿತ ಕೃತಿಗಳಲ್ಲಿ ೧೯ ಕಾದಂಬರಿಗಳಿವೆ. ಅಂದರೆ ಗಂಭೀರ ವಿಷಯಗಳಿರುವ ಕೃತಿಗಳ ಭಾಷಾಂತರಗಳೇ ಹೆಚ್ಚು.

ಒಟ್ಟಿನ ಗ್ರಂಥಗಳಲ್ಲಿ ಕಾದಂಬರಿಗಳ ಸಂಖ್ಯೆಯೇ ಹೆಚ್ಚಿನದು. ಆದರೆ ಇತರ ಗಂಭೀರ ಹಾಗೂ ಅಭ್ಯಾಸಪೂರ್ಣ ಗ್ರಂಥಗಳ ರಚನೆಯು ಕಡೆಗಣಿಸುವಷ್ಟು ಕಡಿಮೆಯೇನಿಲ್ಲ. ಇಂಗ್ಲಿಷನ್ನು ಮೊದಲು ಮಾಡಿಕೊಂಡು ಇತರ ಯಾವುದೇ ಭಾಷೆಗಳಲ್ಲಿ ಇರುವಷ್ಟೇ ಕಾದಂಬರಿ—ಇತರ ಬರವಣಿಗೆಯ ಪ್ರಮಾಣವು ನಮ್ಮಲ್ಲಿಯೂ ಇದೆ.

ಕೈಹೊತ್ತಗೆಯ ಕಾದಂಬರಿಗಳು ಎಂದಿನಂತೆ ಸಾಕಷ್ಟು ಪ್ರಕಟವಾಗಿವೆ. ಪ್ರಕಟವಾದ ೮೦ ಕಾದಂಬರಿಗಳಲ್ಲಿ ೭೦ ಈ ಬಗೆಯ ಕಾದಂಬರಿಗಳಾಗಿವೆ.

ಐತಿಹಾಸಿಕ ಮತ್ತು ಇತಿಹಾಸ ಪ್ರಸಿದ್ಧ ಪುರುಷರ ಜೀವನ ಕಥೆಗಳ ಕಾದಂಬರಿಗಳ ವಿಚಾರದಲ್ಲಿ ಈ ವರ್ಷ ಪ್ರಗತಿಯು ಕಂಡುಬರುತ್ತದೆ. ಕೆಲ ಉತ್ತಮ ಕೃತಿಗಳು ಈ ದಿಸೆಯಲ್ಲಿ ಹೊರಬಂದಿವೆ.

ನಮ್ಮ ಸಾಮಾಜಿಕ ಕಾದಂಬರಿಕಾರರಲ್ಲಿ ಸಮಸ್ಯೆಯೊಂದನ್ನು ಎತ್ತಿಕೊಂಡು ತನ್ಮೂಲಕ ಕಥೆಯೊಂದನ್ನು ಚಿತ್ರಿಸುವ ಪ್ರವೃತ್ತಿಯು ಬಲವತ್ತರವಾಗಿ ಇದೆ. ಹೀಗಾಗಿ ಪ್ರೇಮ ಅಥವಾ ಪ್ರಣಯವೇ ಪ್ರಧಾನವಾಗಿರುವ ಕೃತಿಗಳು ಗಾಬರಿಗೊಳಿಸುವ ರೀತಿಯುಲ್ಲಿ ಇಲ್ಲ. ಆದರೆ ಸಮಸ್ಯೆ ಅಥವಾ ಬೇರೆ ಬಗೆಯ ಜೀವನದ ಚಿತ್ರಣವಿರುವಾಗಲೂ ಗಂಡು-ಹೆಣ್ಣಿನ ಸಂಬಂಧಗಳನ್ನು ಅವಶ್ಯಕತೆಗಿಂತ ಹೆಚ್ಚಾಗಿಯೆ ನಿರೂಪಿಸಿ ಓದುಗರ ಆಸ್ಥೆಯನ್ನು ಕೆರಳಿಸುವ ಪ್ರಯತ್ನ ಬಹುತರ ಎಲ್ಲ ಕಾದಂಬರಿಗಳಲ್ಲಿ ಇದೆ.

ಕೆಲವು ಕಾದಂಬರಿಕಾರರು ವರುಷಕ್ಕೆ ಒಂದಲ್ಲ, ಮೂರು, ನಾಲ್ಕು, ಏಳು ಕಾದಂಬರಿಗಳ ವರೆಗೂ ರಚಿಸಿದುದು ವಿಶೇಷ ಸಂಗತಿಯಾಗಿದೆ. (ಪ್ರಮುಖ ಲೇಖ

---

* ಈ ಮತ್ತು ಇನ್ನು ಮುಂದಿನ ಸಂಖ್ಯೆಗಳು ಸ್ವಲ್ಪ ಹೆಚ್ಚುಕಡಿಮೆ ಇರಬಹುದು.

ಕರ ಪಟ್ಟಿಯನ್ನು ದಯವಿಟ್ಟು ನೋಡುವುದು.) ಈ ಪಣದಲ್ಲಿ ಏಳು ಕಾದಂಬರಿಗಳನ್ನು ರಚಿಸಿ, ನಿರಂಜನರು ವಿಕ್ರಮವನ್ನು ಸ್ಥಾಪಿಸಿದ್ದಾರೆ.

ತಾವು ಹಿಂದೆ ಬರೆದ ಕಾದಂಬರಿಯ ಕಥೆಯನ್ನೇ ಮುಂದರಿಸಿ ಮುಂದಿನ ಕಾದಂಬರಿಯನ್ನು ರಚಿಸುವ ಪದ್ಧತಿಯು ೮–೧೦ ಜನ ಕಾದಂಬರಿಕಾರರಲ್ಲಿ ಕಂಡು ಬಂದಿದೆ.

ಇನ್ನು ಕ್ರಮವಾಗಿ ಒಂದೊಂದು ವಿಷಯಗಳನ್ನು ನೋಡೋಣ. ಸಂದರ್ಭ ಗ್ರಂಥಗಳಲ್ಲಿ, ಸಂಭಾವನಾ ಗ್ರಂಥಗಳು ಬಹಳವಾಗಿ ಕಾಣಿಸಿಕೊಳ್ಳುತ್ತವೆ. ೧೯೫೫ರ ವರೆಗೆ ಹೊರಟ ಸನ್ಮಾನ ಮತ್ತು ಸ್ಮಾರಕಗ್ರಂಥಗಳ ಒಟ್ಟು ಸಂಖ್ಯೆಯು ಸಮಸಮೀಪ ವಾಗಿ, ಈ ಒಂದೇ ವರ್ಷದಲ್ಲಿ ಇಂಥ ಗ್ರಂಥಗಳು ಹೊರಬಂದುದು ಒಂದು ವಿಶೇಷ.

ಹಳಗನ್ನಡ ಕೃತಿಗಳ ಪ್ರಕಟನೆಯಾಗಲೀ, ಅವುಗಳ ಮೇಲಿನ ವಿಮರ್ಶೆಯಾಗಲೀ ಈ ವರ್ಷ ಅಷ್ಟಾಗಿ ಬಂದಿಲ್ಲ.

ಕವಿತೆ ಕನ್ನಡ ಸಾಹಿತ್ಯವಾಹಿನಿಯಲ್ಲಿ ಏಕಪ್ರಕಾರವಾದ ಧಾರೆಯಾಗಿದೆ. ಹೆಚ್ಚು ಕಡಿಮೆಗಳು ಇರುವುದಿಲ್ಲ. ಈ ವರ್ಷ ೨೮ ಹೊಸಗನ್ನಡ ಕವನಗಳು ಪ್ರಕಟವಾಗಿದ್ದು, ನವ್ಯ ಕವಿತೆ, ಜನಪದ ಗೀತ, ವಿದ್ಯಾರ್ಥಿಗಳ ರಚನೆ, ಆಧ್ಯಾತ್ಮಿಕತೆ, ಖಂಡಕಾವ್ಯ-ನಿರ್ಮಾಣ ಇವನ್ನು ಅವುಗಳಲ್ಲಿ ಕಾಣಬಹುದು.

ಹಳಬರಾದ ಶ್ರೀ. ಬೇಂದ್ರೆಯವರ ೩ ಸಂಗ್ರಹಗಳು ಒಂದೇ ವರ್ಷಕ್ಕೆ ಬಂದದ್ದಿದ್ದರೆ, ಶ್ರೀಗಳಾದ ಶಿವರುದ್ರಪ್ಪ, ಹಕಾರಿ ದೇವೇಂದ್ರ, ಎಲ್ಲಟ್ಟಿ, ಯರ್ಮುಂಜ, ಗದಗಕರ, ಮುಂತಾದ ಕವಿಗಳು ತಮ್ಮ ಪ್ರಥಮ ಸಂಗ್ರಹವನ್ನು ಹೊರತಂದಿದ್ದಾರೆ.

ಸಾಮಾಜಿಕ ನಾಟಕಗಳ ಮತ್ತು ಏಕಾಂಕ ಪ್ರಹಸನಗಳ ಸಂಖ್ಯೆ ಈ ವರ್ಷ ದೊಡ್ಡದಿದೆ. ಇವುಗಳಲ್ಲಿ ಮೈಸೂರ ವಿಭಾಗದ ಲೇಖಕರ ಕೃತಿಗಳು ಬಹುಸಂಖ್ಯೆಯಲ್ಲಿ ದೊರೆಯುತ್ತವೆ. ಫ್ರೆಂಚ ನಾಟಕಕಾರ ಮೊಲಿಯರನು ಕೆಲವರಿಗೆ ಸ್ಫೂರ್ತಿಯನ್ನೂ ವಸ್ತುವನ್ನೂ ಒದಗಿಸಿದ್ದಾನೆ. ಪ್ರಸಾರ ನಾಟಕಗಳ ಪ್ರಕಾರಕ್ಕೆ ಎಸ್. ಎನ್. ಶಿವ ಸ್ವಾಮಿಯವರದೊಬ್ಬರದೇ ಕಾಣಿಕೆ ಇದೆ.

ಸಣ್ಣ ಕತೆಗಳ ವಿಭಾಗದಲ್ಲಿ ಕತೆಗಾರ್ತಿಯರದೇ ಪ್ರಾಬಲ್ಯ. ಶ್ರೀಗಳಾದ ಅಶ್ವತ್ಥ, ದ. ಬಾ. ಕುಲಕರ್ಣಿ, ವೆಂ. ಮು. ಜೋಶಿ, ಅ. ಲ. ಯಮುನಾ ಇವರ ಜೊತೆಗೆ ಅಣ್ಣೀಗೇರಿ, ಗೀತಾದೇವಿ ಕುಲಕರ್ಣಿ, ಹಾ. ಮಾ. ನಾಯಕ ಮೊದಲಾದ ಉದಯೋನ್ಮುಖರೂ ಇದ್ದಾರೆ. ಆದರೂ ಸಣ್ಣ ಕಥೆಗಳ ಸಂಗ್ರಹಗಳ ಸಂಖ್ಯೆ ೧೭ ಮಾತ್ರ. ಈ ಸಲ ನಾಟಕ ಕಥನಗಳೂ, ಪೌರಾಣಿಕ ವ್ಯಕ್ತಿಗಳ ಕಥನಗಳೂ ಪ್ರತ್ಯೇಕವಾಗಿಯೆ, ಸಾಕಷ್ಟು ಸಂಖ್ಯೆಯಲ್ಲಿ ಬಂದದ್ದಿವೆ.

ಪ್ರಬಂಧಗಳಲ್ಲಿ ಸಾಹಿತ್ಯ ವಿಮರ್ಶೆ ಮಹತ್ವದ್ದು. ಆಧುನಿಕ ಸಾಹಿತ್ಯಿಕರ ವಿಮರ್ಶೆಯನ್ನು ಮಾಡುವ ಪದ್ಧತಿಯು ಪ್ರಾರಂಭವಾಗಿದೆ. ಅರೆಮೂಕ, ಪುಸ್ತಕ ಪ್ರಪಂಚ, ಭಾವಗೀತೆ, ಬೇಂದ್ರೆ, ಕಾರಂತ, ಸಂಸಕವಿ— ಇವು ಇಂತಹ ಕೆಲವು ಪ್ರಕಟನೆಗಳಾಗಿವೆ.

ಸಾಮಾನ್ಯ ಪ್ರಬಂಧಗಳು ಮತ್ತು ಲಲಿತ ಕಲೆಗಳ ವಿಷಯದ ಪುಸ್ತಕಗಳು ಅತಿ ಕಡಿಮೆಯುವಾಗಿವೆ. ಯಕ್ಷಗಾನ ಪರಿಚಯ ಕಾವ್ಯವೊಂದನ್ನು ಮಾತ್ರ ಬೇರೆಯಾಗಿ ಹೇಳುವಂತಹ ಸ್ಥಿತಿ ಇದೆ.

ಸದ್ಯಿಲ್ಲದೆ ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾಗುವ ಪುಸ್ತಕಗಳೆಂದರೆ ಜೀವನ ಚರಿತ್ರೆಗಳು. ಅವುಗಳಲ್ಲಿ ಧಾರ್ಮಿಕ ವ್ಯಕ್ತಿಗಳ ಚರಿತ್ರೆಗಳೇ ಹೆಚ್ಚು; ಈ ಬಗೆಯು ಮೊದಲಿನಿಂದಲೂ ಇದೆ. ರಾಮಕೃಷ್ಣ ಪರಮಹಂಸರು, ಲೋಕಮಾನ್ಯ ಟಿಳಕರು ಮತ್ತು ವಿನೋಬಾಜಿಯವರು ಈ ಸಲ ವಿಶೇಷವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿದ್ದಾರೆ.

ಧರ್ಮ-ತತ್ವಜ್ಞಾನಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಅನುವಾದಗಳೂ ಇವೆ. ಮೂಲ ವಿವೇಚನೆಯ ಗ್ರಂಥಗಳೂ ಇವೆ. ಪ್ರಾಚೀನ ಗ್ರಂಥಗಳಲ್ಲಿ ಈ ವರ್ಷ ಭಗವದ್ಗೀತೆಗೆ ಹೆಚ್ಚು ಪ್ರಾಶಸ್ತ್ಯ ದೊರಕಿದೆ.

ವೈಜ್ಞಾನಿಕ ಗ್ರಂಥಗಳಿಗೆ ಈ ವರ್ಷವೂ ಬಡತನವೇ. ಹಾಗೆಯೇ ರಾಜಕೀಯ ಸಾಮಾಜಿಕ ವಿಷಯಗಳ ಪುಸ್ತಕ ಸಂಖ್ಯೆಯೂ ಅತಿ ಕಡಿಮೆ. ಆರ್ಥಿಕ ವಾಣಿಜ್ಯ ವಿಭಾಗವಲ್ಲಿ ಒಂದೆರಡು ಪುಸ್ತಕ ಹೆಚ್ಚಾಗಿ ಕಂಡರೂ, ಅವು ಪಂಚವಾರ್ಷಿಕ ಯೋಜನೆಗಳ ಸಂಬಂಧವಲ್ಲಿ ಸರಕಾರೀ ಗ್ರಂಥಗಳಾಗಿವೆಯಲ್ಲದೇ ಆ ವಿಭಾಗವೂ ಬಡವಾದುದೇ.

ಹೊಸತಾಗಿ ಈ ವರ್ಷ ೧೬ ಪತ್ರಿಕೆಗಳು ಪ್ರಕಟವಾಗಿವೆ. ಒಂದೆರಡು ಹುಟ್ಟಿದ ಕೂಡಲೇ ತೀರಿಕೊಂಡವು. ಕಸ್ತೂರಿ, ಸಂಗಮ ಮತ್ತು ಸಾಧನಾ ಈ ಪತ್ರಿಕೆಗಳು ಬಲು ಬೇಗ ಪ್ರತಿಷ್ಠೆಯನ್ನು ಪಡೆದುವು.

ಮಂಗಳೂರಿನ ಒಂದಾಣೆ ಮಾಲೆಯವರು ಕಳೆದ ವರುಷ ೧೦೦೦ ಪುಟಗಳಷ್ಟು ಸಾಹಿತ್ಯವನ್ನು ೬೦ ಚಿಕ್ಕ ಪುಸ್ತಕಗಳಲ್ಲಿ ಒದಗಿಸಿದ್ದುದು ಒಂದು ವಿಶೇಷವಾಗಿದೆ. ಅವುಗಳಲ್ಲಿ ಹಲವು ಕೃತಿಗಳು ವಿಷಯಗೌರವದಿಂದ ಕೂಡಿವೆ.

ಸಾಕ್ಷರತಾ ಪ್ರಸಾರದ ದೃಷ್ಟಿಯಿಂದ ಸುಮಾರು ೪೦ ಪುಸ್ತಕಗಳು ಪ್ರಕಟವಾಗಿರಬಹುದು. ಮೈಸೂರ ಕಡೆಗೆ ವಯಸ್ಕರ ಶಿಕ್ಷಣ ಮಾಲೆಯವರೂ ಧಾರವಾಡ ಕಡೆಗೆ ಸಮಾಜ ಪುಸ್ತಕಾಲಯದವರೂ ಇಂಥ ಕೆಲಸದ ಮುಂದಾಳುಗಳಾಗಿದ್ದಾರೆ.

ಇನ್ನು ಪ್ರಕಾಶನ ಕಾರ್ಯ. ಅತಿ ಹೆಚ್ಚು ಪುಸ್ತಕಗಳನ್ನು ಈ ವರ್ಷ ಪ್ರಕಟಿಸಿದವರೆಂದರೆ ಧಾರವಾಡದ ಸಮಾಜ ಪುಸ್ತಕಾಲಯದವರು. ಅನಂತರದ ಸ್ಥಾನವು ಮೈಸೂರಿನ ಶಾರದಾ ಮಂದಿರದವರಿಗೆ ಸಲ್ಲುತ್ತದೆ (ಇತರ ವಿವರಣೆಗಳಿಗೆ ಕೊನೆಯಲ್ಲಿರುವ ಪ್ರಕಾಶಕರ ಪಟ್ಟಿಯನ್ನು ನೋಡುವುದು.) ಹೊಸ ಪ್ರಕಾಶಕರ ಸಂಖ್ಯೆಯು ಹೆಚ್ಚುತ್ತ ನಡೆದಿದೆ. ಹೆಸರಾಂತ ಪ್ರಕಾಶಕರು ಕೆಲವರು ಈ ವರ್ಷ ಒಂದೊಂದೇ ಪುಸ್ತಕ ಕೊಟ್ಟಿದ್ದಾರೆ. ವ್ಯಾಪಾರೀ ಲಾಭದ ದೃಷ್ಟಿಯಿಲ್ಲದ ಕೆಲವು ಸಂಸ್ಥೆಗಳು ಪ್ರಕಾಶನ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಿವೆ.

ಲೇಖಕರೇ ದುಡ್ಡು ಹಾಕಿ ತಮ್ಮ ಪುಸ್ತಕಗಳನ್ನು ಅಚ್ಚುಹಾಕಿಸುವ ದುರ್ದೈವದ ಪ್ರಸಂಗವು ಈ ವರ್ಷ ೫೦ ಜನ ಲೇಖಕರಿಗೆ ಬಂದೊದಗಿದೆ.

ಪ್ರಕಟವಾದ ೪೦೦ ಪುಸ್ತಕಗಳಲ್ಲಿ ಪುಸ್ತಕೀಯ ದೋಷಗಳು ಹೇರಳವಾಗಿ ಉಳಿದಿವೆ. ಗ್ರಂಥೋದ್ಯಮ ಅಥವಾ ಗ್ರಂಥ ಉತ್ಪಾದನೆಯ ವಿಷಯದಲ್ಲಿ ಸಂಬಂಧಪಟ್ಟವರು ಎಚ್ಚರವಹಿಸುವುದಿಲ್ಲ. ಪ್ರಕಾಶಕರ ಹೆಸರೇ ಇಲ್ಲದ ಪುಸ್ತಕಗಳ ಲೆಕ್ಕವಿಲ್ಲ. ಅದರಂತೆ ಪ್ರಕಟನೆಯ ವರ್ಷ, ಬೆಲೆ, ಪರಿವಿಡಿ ಮತ್ತಿತರ ಇಂಥ ಪುಸ್ತಕೀಯ ಮಾಹಿತಿ ಇರುವುದಿಲ್ಲ. ಮುದ್ರಣ ದೋಷಗಳು, ಕೀಳು ಕಾಗದ ಇವು ಇತರ ಲಕ್ಷಣಗಳು. ಆದರೆ ಮೈಸೂರ ವಿಭಾಗದ ಪುಸ್ತಕಗಳು ಮುದ್ರಣ, ಹೊರವ್ಮೈ ತಕ್ಕಮಟ್ಟಿಗೆ ಅಂದವಾಗಿರುತ್ತವೆ. ಉತ್ತರ ಕರ್ನಾಟಕ ವಿಭಾಗದಲ್ಲಿ ಅಂದವಾಗಿರುವ ಪುಸ್ತಕಗಳು ಕಡಿಮೆ.

ಇದು ವರೆಗೆ ೧೯೫೬ರ ಕೃತಿಗಳ ಯಾವುದೇ ಬಗೆಯ ವಿಮರ್ಶೆಗೆ ತೊಡಗದೆ, ಅದರ ಗಾತ್ರ ಪರಿಚಯವನ್ನು ಮಾತ್ರ ಇಲ್ಲಿ ಮಾಡಿಕೊಟ್ಟಿದೆ. ಇನ್ನು ಮುಂದೆ ಕೊಟ್ಟಿರುವ ಪುಸ್ತಕಗಳ ವಿವರಗಳ ವಾಚನಕ್ಕೆ ಇದು ಮಾರ್ಗದರ್ಶಿಯಾಗಬೇಕು ಎಂಬ ಆಶಯವೂ ಇದೆ. ಒಟ್ಟಿನಲ್ಲಿ ವಾರ್ಷಿಕ ಸಾಧನ ಸಾಮಗ್ರಿಗಳನ್ನಷ್ಟೇ ಈ ಲೇಖದಲ್ಲಿ ಹೇಳಬೇಕೆಂದು ಇಟ್ಟುಕೊಂಡದ್ದಿದೆ.

ಇದರ ಜೊತೆಗೆ ಪ್ರತ್ಯೇಕವಾಗಿ ಕೊಟ್ಟಿರುವ ಪ್ರಮುಖ ಲೇಖಕರು, ಸಂಗ್ರಾಹ್ಯ ಗ್ರಂಥಗಳು—ಇವನ್ನೂ ಒಮ್ಮೆ ಗಮನಿಸಬೇಕು.

ಕೊನೆಯಲ್ಲಿ ಕೊಟ್ಟಿರುವ ಸೂಚಿಗಳು ಪುಸ್ತಕದ ಮುಖ್ಯ ಭಾಗದಷ್ಟೇ ಮಹತ್ವವಾದವುಗಳಾಗಿವೆ. ಯಾವ ಯಾವ ವಿಷಯಗಳ ಮೇಲೆ ನಮ್ಮಲ್ಲಿ ಸಾಹಿತ್ಯರಚನೆಯಾಗಿದೆಯೆಂಬುದನ್ನು ಅಲ್ಲಿ ತೋರಿಸಿದ್ದಿದೆ. ನಿಮ್ಮ ಮನಸ್ಸಿಗೆ ತೋಚುವ ಯಾವುದೇ ವಿಷಯವನ್ನು (ಉದಾ. ಗೆ, ಭೂದಾನ ಯಜ್ಞ, ಕನ್ನಡ ನಾಡು) ಎತ್ತಿಕೊಂಡು, ಅದರ ಮುಂದೆ ಕೊಟ್ಟಿರುವ ಪುಟಗಳಲ್ಲಿ ಅವನ್ನು ನೋಡಿಕೊಂಡರೆ, ಈ ವಿಷಯ ಸೂಚಿಯ ಉಪಯುಕ್ತತೆಯು ಮನದಟ್ಟಾಗುವುದು.

ಆದರಂತೆ ಮೂಲ ಲೇಖಕರು ಅನ್ಯಭಾಷಿಕ ಲೇಖಕರು, ಅನುವಾದಕರು, ಸಂಪಾದಕರು, ಸಂಗ್ರಹಕಾರರು ಇವರೆಲ್ಲರನ್ನೂ ಒಳಗೊಂಡ ಲೇಖಕರ ಸೂಚಿಯೂ ಅಷ್ಟೇ ಪ್ರಯೋಜನಕಾರಿಯಾದದ್ದಿದೆ. ಅನಂತರ ಬಂದ ಪುಸ್ತಕಗಳ ಸೂಚಿಯ ಉಪಯೋಗವಂತೂ ಸ್ಪಷ್ಟವೇ ಇದೆ.

ಕರ್ನಾಟಕ ಯುನಿವರ್ಸಿಟಿ
ಲೈಬ್ರರಿ, ಧಾರವಾಡ

ಶ್ರೀನಿವಾಸ ಹಾವನೂರ

೧೯೫೬ರ ಕೆಲವು ಪ್ರಮುಖ ಲೇಖಕರು

ಆದ್ಯ ರಂಗಾಚಾರ (ಶ್ರೀರಂಗ)

ಅಶ್ವಮೇಧ (ಏಕಾಂಕ) ಪುರುಷ (ಕಾದಂಬರಿ) ಶೋಕಚಕ್ರ (ನಾಟಕ)

ಉಷಾದೇವಿ

ಕನ್ಯಾಸೆರೆ ಧನಪಿಶಾಚಿ ಮೊಗ್ಗಿನ ಜಡೆ (ಕಾದಂಬರಿಗಳು)

ಕೃಷ್ಣರಾಯ, ಅ. ನ.

ಈಚಲ ಮರದವ್ವ ಕಟ್ಟಿದ ಬಣ್ಣ ಜಾತಕ ಪಕ್ಷಿ ಪಾಪಿಯ ನೆಲೆ

ಪುನರಾವತಾರ (ಕಾದಂಬರಿಗಳು) ಸಮುದರ್ಶನ (ಪ್ರಬಂಧ)

ಕುಳಕುಂದ ಶಿವರಾಯ (ನಿರಂಜನ)

ಕಲ್ಯಾಣಸ್ವಾಮಿ ಕೊನೇ ನಮಸ್ಕಾರ ದೀಕ್ಷೆ ನನ್ನ ಬಾಲ್ಯ (ಮ್ಯಾಕ್ಸಿಂ ಗಾರ್ಕಿ)

ನವೋದಯ ಮಿಣುಕು ಹುಳ (ಕಾದಂಬರಿಗಳು)

'ತ್ರಿವೇಣಿ'

ಅಪಜಯ ಮುಚ್ಚಿದ ಬಾಗಿಲು ಮೊದಲ ಹೆಜ್ಜೆ ಹೃದಯಗೀತ (ಕಾದಂಬರಿ)

ಪುರಾಣಿಕ ಕೃಷ್ಣಮೂರ್ತಿ

ಕುಲವಧು ಧರ್ಮದೇವತೆ ಮನಸೋತ ಮನದನ್ನೆ

ವೇಷಧಾರಿ (ಕಾದಂಬರಿಗಳು) ಜೀವನಾದ (ಕವನ)

ಬೇಂದ್ರೆ ದ. ರಾ.

ಮುಕ್ತಕಂಠ ಸೂರ್ಯಪಾನ ಹೃದಯ ಸಮುದ್ರ (ಕವನಗಳು)

ಮಾಳವಾಡ ಸ. ಸ.

ಪುಸ್ತಕ ಪ್ರಪಂಚ ಸಾಹಿತ್ಯ ಸಮಾಲೋಚನೆ ಸ್ವಾದಿ ಅರಸು ಮನೆತನ

ರಾಜರತ್ನಂ ಜಿ. ಪಿ.

ಧರ್ಮಪದ ಪ್ರವೇಶಿಕಾ ಭಗವಾನ್ ಬುದ್ಧ

ರಾಘವಾಂಕನ ಹಲ್ಲು (ಹರಟೆ) ಸಂಸಕವಿ

ವೆಂಕಟರಾಜ, ಎಸ್.

ತುಂಗಮ್ಮನ ತವರುಮನೆ ಧರ್ಮಶಾಲೆ (ಕಾದಂಬರಿಗಳು)

ಕೈಲಾಸದಲ್ಲಿ ಕಮ್ಯುನಿಸ್ಟರು (ನಾಟಕ)

ಸುಬ್ಬರಾಯ, ತ. ರಾ.

ಎರಡು ಹೆಣ್ಣು ಒಂದು ಗಂಡು ಚಕ್ರತೀರ್ಥ

ಸಿಡಿಲುಮೊಗ್ಗು ಹೊಯ್ಸಳೇಶ್ವರ ವಿಷ್ಣುವರ್ಧನ (ಕಾದಂಬರಿಗಳು)

೧೯೫೭ರ ಕೆಲವು ಸಂಗ್ರಾಹ್ಯ ಕೃತಿಗಳು

★

ಅಭಿವಂದನೆ	ಎ. ಆರ್. ಕೃಷ್ಣಶಾಸ್ತ್ರಿಗಳ ಸನ್ಮಾನ ಗ್ರಂಥ.
ಕನ್ನಡ ಕಾವ್ಯ ಪ್ರಕಾಶ	ಕೆ. ಕೃಷ್ಣಮೂರ್ತಿಯವರ ವಿವರ ಅನುವಾದ.
ಕನ್ನಡ ಛಂದೋವಿಕಾಸ	ಡಿ. ಎಸ್. ಕರ್ಕಿಯವರ ಸಂಶೋಧನ ಗ್ರಂಥ.
ಗೋದಾನ	ಪ್ರೇಮಚಂದರ ಸುಪ್ರಸಿದ್ಧ ಹಿಂದೀ ಕಾದಂಬರಿ.
ಚಿಕವೀರ ರಾಜೇಂದ್ರ	ಮಾಸ್ತಿ ವಿರಚಿತ ಕೊಡಗಿನ ಕಾದಂಬರಿ.
ಜಗನ್ನಾಥದಾಸರು	ಕೆ. ಎಂ. ಕೃಷ್ಣರಾಯರ ವಿಮರ್ಶನ ಗ್ರಂಥ.
ನಮ್ಮ ಮನೆಯ ದೀಪ	ಹಾ. ಮಾ. ನಾಯಕರ ಸುರಸ ಕಥಾನಕ.
ನಮ್ಮ ದೇಶ ಭಾರತ	ಭೌಗೋಲಿಕ ಭಾರತದ ಸಮಗ್ರ ಪರಿಚಯ.
ಪದ್ಯ ರತ್ನಾಕರ	ಹಳಗನ್ನಡ ಕವಿಗಳ ಬೃಹತ್ ಸಂಗ್ರಹ.
ಪ್ಲೇಟೋವಿನ ಆದರ್ಶ ರಾಜ್ಯ	ಎಂ. ಎ. ವೆಂಕಟರಾಯರ ವಿವೇಚನೆ.
ಬಸವನಾಳ ಸ್ಮಾರಕ ಸಂಪುಟ	ದಿವಂಗತ ಬಸವನಾಳರಿಗೆ ಶ್ರದ್ಧಾಂಜಲಿ.
ಭಾವಗೀತೆ	ಎಸ್. ವಿ. ಪರಮೇಶ್ವರಭಟ್ಟರ ವಿವೇಚನೆ.
ಮಣಿಮುಕುರಂ	'ಜ. ಚ. ನಿ.'ಯವರ ಸಿದ್ಧಾಂತ ಶಿಖಾಮಣಿ.
ಮಹಾ ಪುರುಷ	ಧರ್ಮಸ್ಥಳದ ಮಂಜಯ್ಯ ಹೆಗಡೆಯವರ ಚರಿತ್ರೆ.
ಮಾರ್ಕೊ ಪೋಲೋ ಪ್ರವಾಸ	ಕನ್ನಡದಲ್ಲಿ ನಾಗೇಗೌಡರ ವಿವರಣೆ.
ಮೈಸೂರು ರಾಜ್ಯ	ಕನ್ನಡ ರಾಜ್ಯೋದಯ ಕಾಲದ ಪ್ರಕಟನೆ.
ರಾಮಕೃಷ್ಣ ಲೀಲಾಪ್ರಸಂಗ	ರಾಮಕೃಷ್ಣ ಪರಮಹಂಸರ ಸಮಗ್ರಜೀವನ.
ಸಮರಸವೇ ಜೀವನ	ವಿ. ಕೃ. ಗೋಕಾಕರ ಬೃಹತ್ ಕಾದಂಬರಿ.
ಸಮೀಕ್ಷೆ	ಶಿವರಾಮ ಕಾರಂತರ ಈ ವರ್ಷದ ಕೃತಿ.
ಸೌಂದರನಂದ	ಅಶ್ವಘೋಷನ ಖಂಡಕಾವ್ಯದ ಕನ್ನಡ ರೂಪ
ಹೃದಯಾಂತರಾಳ	ಶಿವಸ್ವಾಮಿಯವರ ರೇಡಿಯೊ ನಾಟಕಗಳು.
ಹಿರೋಶಿಮಾದಿಂದ ಜಿನೇವಾ	ಅಣುಶಕ್ತಿಯ ವೈಜ್ಞಾನಿಕ-ಕಥನ.

[ಪ್ರಮುಖ ಲೇಖಕರ ಪಟ್ಟಿಯಲ್ಲಿಯೂ ಕೆಲವು ಸಂಗ್ರಾಹ್ಯ ಕೃತಿಗಳಿವೆ]

೧೯೫೬ರಲ್ಲಿ ಪ್ರಕಟವಾದ

ಗ್ರಂಥಗಳ ಪರಿಚಯ

೧೯೫೬ ನೆಯ ವರುಷದಲ್ಲಿ ಪ್ರಕಟವಾದ ಪುಸ್ತಕಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ. ಬೇರೆ ಬೇರೆ ಲೇಖಕರ ಬರಹಗಳ ಸಂಕಲನಗಳನ್ನೂ, ಅದರಂತೆ ಅನುವಾದ ಅಥವಾ ರೂಪಾಂತರ ಗ್ರಂಥಗಳನ್ನೂ ಆ ಆ ವಿಷಯ ಇಲ್ಲವೆ ಉಪವಿಷಯ ದಲ್ಲಿಯೇ ಕೊಟ್ಟಿದೆ.

೧ ಸಂದರ್ಭ ಗ್ರಂಥ
- —ಡಿರೆಕ್ಟರಿ
- —ಕೋಶಗಳು
- —ಸಂಭಾವನಾ ಗ್ರಂಥಗಳು

೨ ಹಳಗನ್ನಡ
- —ಕಾವ್ಯ
- —ಶಾಸ್ತ್ರ ಗ್ರಂಥ

೩ ಕವನ
- —ಸಂಕಲನ
- —ಭಾವಗೀತೆ
- —ಖಂಡ ಕಾವ್ಯ

೪ ನಾಟಕ
- —ಗೀತರೂಪಕ
- —ಪೌರಾಣಿಕ-ಐತಿಹಾಸಿಕ
- —ಸಾಮಾಜಿಕ-ರಾಜಕೀಯ
- —ಏಕಾಂಕ-ಪ್ರಹಸನ
- —ಪ್ರಸಾರ ನಾಟಕ

೫ ಕಥನ
- —ಸಣ್ಣ ಕತೆಗಳು
- —ಇತರ ಕಥನಗಳು

೬ ಕಾದಂಬರಿ
- —ಐತಿಹಾಸಿಕ
- —ಸಾಮಾಜಿಕ-ರಾಜಕೀಯ
- —ಅನುವಾದಗಳು

೭ ಪ್ರಬಂಧ
- —ಸಾಮಾನ್ಯ
- —ಲಲಿತ ಪ್ರಬಂಧ
- —ಸಾಹಿತ್ಯ ವಿಮರ್ಶೆ
- —ಲಲಿತ ಕಲೆಗಳು

೮ ಚರಿತೆ
- —ಭೌಗೋಲಿಕ
- —ಸ್ಥಳ-ಪ್ರವಾಸ
- —ಇತಿಹಾಸ
- —ಜೀವನ ಚರಿತ್ರೆ

೯ ಧರ್ಮ-ವೇದಾಂತ
- —ಪ್ರಾಚೀನ ಗ್ರಂಥ
- —ತತ್ವಜ್ಞಾನ
- —ಧಾರ್ಮಿಕ

೧೦ ವಿಜ್ಞಾನ
- —ಸಾಮಾನ್ಯ
- —ಗಣಿತ-ಜ್ಯೋತಿಷ
- —ಭೌತ-ರಸಾಯನ
- —ಕೃಷಿಶಾಸ್ತ್ರ
- —ಆರೋಗ್ಯ

೧೧ ಸಾಮಾಜಿಕ ವಿಷಯ
- —ಶಿಕ್ಷಣ-ಮನಶ್ಶಾಸ್ತ್ರ
- —ರಾಜ್ಯ ಶಾಸ್ತ್ರ
- —ಆರ್ಥಿಕ-ವಾಣಿಜ್ಯ
- —ಕಾನೂನು

೧ ಸಂದರ್ಭಗ್ರಂಥಗಳು

ಒಂದು ನಿರ್ದಿಷ್ಟ ವಿಷಯದ ಮಾಹಿತಿಯನ್ನು ಪಡೆಯಲಿಕ್ಕೆ ಉಪಯೋಗವಾಗುವ ಗ್ರಂಥಗಳಿವು. ನಿಘಂಟುಗಳು, ಕೋಶಗಳು, ಡಿರೆಕ್ಟರಿಗಳು, ವರದಿಗಳು, ವಿಷಯ ಸೂಚಿಗಳು, ನಕಾಶಗಳು ಇದರಲ್ಲಿ ಬರುತ್ತವೆ. ಅನುಕೂಲಕ್ಕಾಗಿ ಸನ್ಮಾನ ಮತ್ತು ಸ್ಮಾರಕ ಗ್ರಂಥಗಳನ್ನು ಇಲ್ಲಿಯೇ ಸೇರಿಸಲಾಗಿದೆ.

ಮೈಸೂರು ರಾಜ್ಯ **ಡಿರೆಕ್ಟರಿ**

ಮೈಸೂರು ಸರಕಾರದ ಪ್ರಕಟನೆ, ಬೆಂಗಳೂರು. ೨ ರೂ.

ಹೊಸ ಮೈಸೂರು ರಾಜ್ಯವು ಉದಯಿಸಿದ ಸಂದರ್ಭದಲ್ಲಿ ಹೊರಟ ೪೩೫ ಪುಟಗಳ ಸಚಿತ್ರ ಗ್ರಂಥ. ಲೇಖನಮಾಲೆ, ಅಂಕಿಸಂಖ್ಯೆಗಳು ಹೀಗೆ ಎರಡು ಭಾಗಗಳನ್ನು ಮಾಡಲಾಗಿದೆ. ಕನ್ನಡ ನಾಡಿನ ಇತಿಹಾಸ, ಸಾಂಸ್ಕೃತಿಕ ಚರಿತ್ರೆ, ಮತಧರ್ಮ, ಉದ್ಯಮಗಳು ಮುಂತಾದ ವಿಷಯಗಳ ಮೇಲೆ ವಿದ್ವಾಂಸರಿಂದ ಬರೆಸಿದ ಬರೆಹಗಳಿವೆ. ನಾಡಿನ ಸಂಚಾರ ಸಂಪರ್ಕವನ್ನು ಕುರಿತ ಕೃಷ್ಣಕುಮಾರರ ವಿಸ್ತೃತ ಲೇಖನವೂ ಇವೆ. ಎರಡನೆಯ ಭಾಗದಲ್ಲಿ ಹೊಸ ರಾಜ್ಯದ ವಿಸ್ತಾರ, ಜನಸಂಖ್ಯೆ, ಶಿಕ್ಷಣ, ಸಹಕಾರ ಸಂಘಗಳು ಮೊದಲಾದ ಹಲವಾರು ವಿಷಯಗಳ ಬಗ್ಗೆ ಆವಶ್ಯಕ ಮಾಹಿತಿ ಹಾಗೂ ಅಂಕಿಸಂಖ್ಯೆಗಳನ್ನು ಕೊಡಲಾಗಿದೆ.

ಮೈಸೂರು ರಾಜ್ಯದ ಅಂಕಿ ಅಂಶಗಳ ಕೈಪಿಡಿ

ಮೈಸೂರು ಸರಕಾರದ ಪ್ರಕಟನೆ, ಬೆಂಗಳೂರು. ?

ಕೋಶಗಳು

ಒಗಟುಗಳು **ರಂಗಣ್ಣ, ರಾ. ನಿ.**

ರಾ. ವಿ. ಕುಲಕರ್ಣಿ, ನಿಡಗುಂದಿ. ೦-೫

ಕನ್ನಡ ಸಂಸ್ಕೃತ ಲಘು ಕ್ರಿಯಾಕೋಶ **ಹಾಸಣಗಿ, ರಾ. ಭ.**

ಲೇಖಕರಿಂದ ಪ್ರಕಾಶಿತ, ಸಕಲೇಶಪುರ. ೦-೮

ಸಂಸ್ಕೃತದ ಅಭ್ಯಾಸ ಮಾಡುವವರಿಗಾಗಿ, ಕನ್ನಡ ಕ್ರಿಯಾಪದಗಳಿಗೆ ಸಂಸ್ಕೃತದ ರೂಪಗಳನ್ನು ಕೊಟ್ಟಿರುವ ಶಬ್ದಕೋಶ.

ಗಾದೆಗಳ ಭಂಡಾರ, ಭಾಗ ೧ **ಕೃಷ್ಣಶಾಸ್ತ್ರಿ, ಜೆ.**

ಸತ್ಯಶೋಧನ ಪ್ರ. ಮಂದಿರ, ಬೆಂಗಳೂರು. ೧-೪

೬ ಸಾವಿರ ಗಾದೆಮಾತುಗಳ ಸಂಗ್ರಹವಿದು. ವಿಷಯವಾರ ವಿಂಗಡಿಸಿ ಅವುಗಳನ್ನು ಅಕಾರಾದಿಯಾಗಿ ಕೊಟ್ಟಿದ್ದಾರೆ.

ನುಡಿ ಮುತ್ತು **' ಉಮಾಪತಿ '**

ಸುದರ್ಶನ ಪ್ರಕಾಶನ, ತಿಪಟೂರು. ೨-೮

ವಿಷಯವಾರ ಸಂಕಲಿಸಲಾದ, ಎರಡು ಸಾವಿರದಷ್ಟು ಹೇಳಿಕೆ ಅಥವಾ ನುಡಿಮುತ್ತುಗಳಿವೆ.

ಸುಖ ಜೀವನ **ನಂಜಪ್ಪ, ದೋಣಿಗಾಲ್**

ಪ್ರಜಾಮಿತ್ರ ಪ್ರಕಾಶನ, ಸಕಲೇಶಪುರ. ೧-೦

ಅನುಭವ ನುಡಿ, ಯಶಸ್ಸಿನ ಗುಟ್ಟು, ಜನಪ್ರಿಯತೆ, ಕಥಾಲೇಖನ, ದೀರ್ಘಾಯುಸ್ಸನ್ನು ಪಡೆಯುವದು, ವ್ಯಾಪಾರದ ಗುಟ್ಟು ಈ ಆರು ವಿಭಾಗಗಳಲ್ಲಿ ಸುಭಾಷಿತ ಹಾಗೂ ಇತರ ಹೇಳಿಕೆಗಳನ್ನು ಸಂಗ್ರಹಿಸಿದ್ದಾರೆ.

ಸಂಭಾವನಾ ಗ್ರಂಥಗಳು

ಅಭಿವಂದನೆ **ಎ. ಆರ್. ಕೃಷ್ಣಶಾಸ್ತ್ರಿಗಳಿಗೆ**

ಎ. ಆರ್. ಕೃ. ಸ. ಪ್ರ. ಸಮಿತಿ, ಮೈಸೂರು. ೧೧-೮

ಹೆಸರಾಂತ ಸಾಹಿತಿಗಳಾದ ಶ್ರೀ. ಕೃಷ್ಣಶಾಸ್ತ್ರಿಗಳ ಬಗೆಗೂ, ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಮೇಲೂ ನಾಡಿನ ವಿವಿಧ ವಿದ್ವಾಂಸರು ಬರೆದು ಒಪ್ಪಿಸಿದ ೫೫ ಪ್ರಬಂಧಗಳ ಸಂಪುಟ. ಎಚ್. ಎಂ. ಶಂಕರನಾರಾಯಣರಿಂದ ಸಂಪಾದಿತ.

ಉಡುಗೊರೆ **ಕೆ. ವಿ. ಪುಟ್ಟಪ್ಪನವರಿಗೆ**

ತ. ವೆಂ. ಸ್ಮಾ. ಗ್ರಂಥಮಾಲೆ, ಮೈಸೂರು. ೬-೦

ಮಹಾಕವಿ ಕುವೆಂಪುವಿನ ವ್ಯಕ್ತಿತ್ವ ಮತ್ತು ಕೃತಿಗಳ ಮೇಲೆ ಅವರ ವಿದ್ಯಾರ್ಥಿವೃಂದದವರ ಲೇಖನಗಳ ಉಡುಗೊರೆ. ದ. ವಿ. ಚಂದ್ರಶೇಖರರಿಂದ ಸಂಪಾದಿತ.

ಪುಣ್ಯಸ್ಮರಣೆ — **ಬಸರೀಗಿಡದ ವೀರಪ್ಪನವರಿಗೆ**

ಬ. ವೀ. ಸ್ಮಾರಕ ಗ್ರಂಥ ಪ್ರ. ಸಮಿತಿ, ಕೊಪ್ಪಳ. ೨-೦

ದಾನಶೂರ ಕೈ. ವಾ. ಬಸರೀಗಿಡದರವರ ಸ್ಮರಣೆಯ ಚಿತ್ರಗಳು, ಅವರ ಬಗ್ಗೆ ಇತರರ ನೆನಹುಗಳು ಹಾಗೂ ಕವನಾಂಜಲಿಗಳು ಇವೆ. ವಿರೂಪಾಕ್ಷ ಮುಧೋಳ (ಸಂ)

ಪೂಜ್ಯ ಉತ್ತಂಗಿಯವರ ಜೀವನ ಚರಿತೆ — **ಹುರಳಿ ಗ. ಶಿ. (ಸಂ)**

ಬಸವಪ್ಪ ಕುರವತ್ತಿ (ಪ್ರ) ರಾಣೇಬೆನ್ನೂರ. ೧-೫

ಸರ್ವಜ್ಞ ಸಾಹಿತಿ ಉತ್ತಂಗಿಯವರ ೭೫ ನೆಯ ಹುಟ್ಟುಹಬ್ಬದ ಪ್ರಕಟನೆ. ಬೇರೆ ಬೇರೆ ಕಡೆಗಳಲ್ಲಿ ಅವರ ಬಗ್ಗೆ ಬಂದ ಮೆಚ್ಚಿಕೆಯ ಕಿರುಬರೆಹಗಳ ಸಂಕಲನ.

ಬಸವನಾಳ ಸ್ಮಾರಕ ಸಂಪುಟ — **ಲಿಂಗೈಕ್ಯ ಶಿ. ಶಿ. ಬಸವನಾಳರಿಗೆ**

ಬಸವನಾಳ ಸ್ಮಾರಕ ಸಮಿತಿ ಪ್ರಕಟನೆ, ಧಾರವಾಡ. ೧೫-೦

ಶಿಕ್ಷಣ ತಜ್ಞರೂ, ಹಳಗನ್ನಡ ಗ್ರಂಥ ಪರಿಶೋಧಕರೂ ಆದ ಬಸವನಾಳರ ಸ್ಮರಣೆಯ ೭೬೧ ಪುಟಗಳ ಹೆಬ್ಬೊತ್ತಿಗೆ. ಅವರ ವ್ಯಕ್ತಿತ್ವ, ಕಾರ್ಯಸಾಧನೆ, ಅವರ ಕೆಲವು ಲೇಖನ-ಭಾಷಣಗಳು, ಇತರರ ಸಂಶೋಧಕ ಲೇಖನಗಳನ್ನು ಒಳಗೊಂಡಿವೆ.

ಶ್ರದ್ಧಾಂಜಲಿ — **ಮುಳಿಯೆ ತಿಮ್ಮಪ್ಪಯ್ಯನವರಿಗೆ**

ಮು. ತಿ. ಸ್ಮಾರಕ ಸಮಿತಿ, ಮಂಗಳೂರು. (೨೫ ರೂ. ಕಾಣಿಕೆ)

ಕನ್ನಡ ಪಂಡಿತರೂ, ಪಂಪ ಕವಿ ಪರಿಶೋಧಕರೂ ಆದ ದಿ. ತಿಮ್ಮಪ್ಪಯ್ಯನವರನ್ನು ಕುರಿತು ಮತ್ತು ಇತರ ಸಾಹಿತ್ಯಿಕ ಪ್ರಬಂಧಗಳ ಸಂಗ್ರಹ. ತೆಕ್ಕುಂಜ ಗೋಪಾಲಕೃಷ್ಣಭಟ್ಟ (ಸಂ).

೨ ಹಳಗನ್ನಡ

ಹಳಗನ್ನಡ ಸಾಹಿತ್ಯವು ಹೆಚ್ಚಾಗಿ ಪದ್ಯಮಯವಾಗಿರುವುದರಿಂದಲೂ, ವಿಷಯ ನಿರೂಪಣೆಯು ಧರ್ಮಾಭಿಮುಖವಾಗಿರುವುದರಿಂದಲೂ, ಕಾವ್ಯಸತ್ವವಿರುವ ಕೃತಿಗಳನ್ನು ಪ್ರತ್ಯೇಕವಾಗಿ ಹೇಳುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಆದರೂ ಕಾವ್ಯ ಹಾಗೂ ಶಾಸ್ತ್ರಗ್ರಂಥಗಳಲ್ಲಿರುವ ವ್ಯತ್ಯಾಸದ ಕಲ್ಪನೆಯು ಇಲ್ಲಿ ಅತಿ ಸ್ಥೂಲವಾದದ್ದಿದೆ.

ಗೀತಗೋವಿಂದ — **ಬಾಲಕೃಷ್ಣ, ಕುಲಮರ್ವ (ಅನು.)**

ಸಮಾಜ ಪುಸ್ತಕಾಲಯ, ಧಾರವಾಡ. ೧-೦

ಜಯದೇವ ಕವಿಯ ಸಂಸ್ಕೃತ ರಸಕಾವ್ಯದ ಮೂಲದೊಡನೆ ಕನ್ನಡ ಗದ್ಯಾನುವಾದವಿದೆ. ಜಯದೇವ ಕವಿಯ ಕಥೆಯೂ ಇದೆ.

ಚೇರಮ ಕಾವ್ಯಂ — **ಚೇರಮಾಂಕ**

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨-೦

೬೩ ಪುರಾತನ ಶಿವಶರಣರಲ್ಲಿ ಒಬ್ಬನಾದ ಚೇರಮನ ಕಥೆಯು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಸಂಪಾದಕರು ಎಸ್. ಬಸವಾರಾಧ್ಯ.

ಪದ್ಯರತ್ನಾಕರ — **ಸಂಕಲನ**

ಹೈದರಾಬಾದ ಪ್ರದೇಶ, ಕನ್ನಡ ಸಾಹಿತ್ಯ ಪರಿಷತ್ತು, ಹೈದರಾಬಾದ. ೫-೮

ಹಳಗನ್ನಡದ ೬೬ ಕವಿಗಳಿಂದ ಆಯ್ದ ಕಾವ್ಯಭಾಗಗಳ ಬೃಹತ್ ಸಂಗ್ರಹ. ಸಂಪಾದಕರು : ನರಸಿಂಗರಾವ ಮಾನ್ವಿ, ಎಫ್. ಜಿ. ಮಠದ, ಸಿದ್ದಯ್ಯ ಪುರಾಣಿಕ.

ಭೀಷ್ಮಪರ್ವ ಸಂಗ್ರಹ — **ಕುಮಾರವ್ಯಾಸ**

? ಬೆಂಗಳೂರು ೧-೮

ಕನ್ನಡ ಮಹಾಭಾರತದ ಭೀಷ್ಮಪರ್ವದ ಪದ್ಯಗಳನ್ನು ಆಯ್ದು ಅರ್ಥಕೋಶದೊಡನೆ ಪ್ರಕಟಿಸಿದವರು ಕೆ. ವೆಂಕಟರಾಮಪ್ಪ ಮತ್ತು ಡಿ. ವಿ. ಶೇಷಗಿರಿರಾವ.

ಮುಲುಹಣದೇವ ಚರಿತೆ — **ಹರಿಹರ**

ಪಂಪಾಸಾಹಿತ್ಯ ಪ್ರ. ದಾವಣಗೆರೆ. ೧-೦

ಶಿವಭಕ್ತ ಮುಲುಹಣನ ಚರಿತೆಯು ರಗಳೆಯಲ್ಲಿ ರಚಿತವಾಗಿದೆ. ಕವಿ ಕೃತಿ ಪರಿಚಯ, ಕಥಾಸಾರದೊಂದಿಗೆ ಸಂಪಾದಿಸಿದವರು ಮಲ್ಲಾಬಾದಿ ದಂಪತಿಗಳು.

ಶ್ರೀಮದ್ರಾಮಾಯಣಂ, ಬಾಲಕಾಂಡಂ **ವೆಂಕಾಮಾತ್ಯ**

ಪ್ರಾಚ್ಯ ಸಂಶೋಧನ ಶಾಖೆ, ಮದ್ರಾಸ. ೫-೮

೧೮ನೆಯ ಶತಕದ ಈ ಕವಿ ಷಟ್ಪದಿಯಲ್ಲಿ ಸಂಪೂರ್ಣ ರಾಮಾಯಣವನ್ನು ರಚಿಸಿದ್ದಾನೆ. ಸುಂದರ, ಅಯೋಧ್ಯಾ, ಕಿಷ್ಕಿಂಧಾ ಕಾಂಡಗಳು ಪ್ರಕಟವಾಗಿವೆ.

ಶರಣಚರಿತ ಮಾನಸ **ತಿಪ್ಪೇರುದ್ರಸ್ವಾಮಿ, ಹೆಚ್. (ಸಂ)**

ಸಾಧನ ಸಾಹಿತ್ಯಮಂದಿರ, ಮೈಸೂರು. ೧-೮

ಷಡಕ್ಷರ ಕವಿಯ ವೃಷಭೇಂದ್ರ ವಿಜಯದಲ್ಲಿ ಬಂದಿರುವ ೯ ಜನ ಶಿವಶರಣರಿಗೆ ಸಂಬಂಧಪಟ್ಟ ಪದ್ಯಗಳನ್ನು ಆಯ್ದು, ಅವರ ಕಥಾನಕವನ್ನು ಕೊಟ್ಟಿದ್ದಾರೆ. ಇವುಗಳ ಗದ್ಯಾನುವಾದವೂ ಕವಿ–ಕೃತಿ ಪರಿಚಯವೂ ಇದೆ.

ಸೌಂದರ ನಂದ **ಶಂಭುಶರ್ಮ, ಕಡವ (ಅನು.)**

ಕನ್ನಡ ಪ್ರಪಂಚ ಪ್ರಕಾಶನ, ಮಂಗಳೂರು ೩-೮

ಬುದ್ಧ ಜೀವನವನ್ನು ವಿವರಿಸುವ ಅಶ್ವಘೋಷನ ಸಂಸ್ಕೃತಕಾವ್ಯದ ಪದ್ಯಾನುವಾದ. ಒಂದೊಂದು ಸರ್ಗಕ್ಕೆ ಒಂದೊಂದು ವಿಧದ ವೃತ್ತವನ್ನು ಬಳಸಿದ್ದಾರೆ. ಗದ್ಯದಲ್ಲಿ ಕಥಾಸಾರವೂ ಇದೆ. ಕವಿಕಾವ್ಯ ವಿಚಾರವಾಗಿ ಬಿ. ಎಂ. ಶರ್ಮರ ವಿಸ್ತೃತ ಲೇಖನವಿದೆ. ಬುದ್ಧಜಯಂತಿಗೆ ಮುಡಿಪಾದ ಈ ಗ್ರಂಥಕ್ಕೆ ಮದ್ರಾಸ ಸರಕಾರದ ಬಹುಮಾನ ದೊರೆತಿದೆ.

ಶಾಸ್ತ್ರ ಗ್ರಂಥಗಳು

ಅನುಭವ ಮುಕುರಂ **ಜನ್ನಕವಿ**

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೦-೮

ಜನ್ನನ ಚಿಕ್ಕ ಕೃತಿ. ಸಂಪಾದಕರು : ಮೋ. ಶಂ. ಸುಬ್ರಹ್ಮಣ್ಯಶಾಸ್ತ್ರೀ.

ಚೆನ್ನಬಸವ ಸಾಹಿತ್ಯ **ಪುರಾಣಿಕ ಅ. (ಸಂ)**

ಸಹಜೀವನ ಪ್ರಕಾಶನ, ಹೈದರಾಬಾದ. ೪-೦

ಚೆನ್ನಬಸವಣ್ಣನವರ ವಚನಗಳನ್ನು ಕರಣಹಸುಗೆ, ಮಂತ್ರಗೋಪ್ಯ, ಅಷ್ಟಾವರಣ, ಷಟ್ಸ್ಥಲ ಮುಂತಾದ ವಿಷಯಗಳನ್ವಯ ಆಯ್ದು ಭಾವಾರ್ಥ ಸಹಿತ ಕೊಟ್ಟಿದೆ.

ಪರಿಷ್ಕೃತ ಭಕ್ತಿ ಗೀತಗಳು — **ಗುರುಪಾದದೇವರಮಠ, ಜಿ. ಪಿ. (ಸಂ)**

ಮೃತ್ಯುಂಜಯ ಸ್ವಾಮಿಗಳು, ಮುರಘಾಮಠ, ಧಾರವಾಡ. ೧-೦

ಮಣಿ ಮುಕುರಂ — **ಜ. ಚ. ನಿ.**

ಶ್ರೀಶೈಲ ಜಗದ್ಗುರು ಸಿಡುಮೂಮಿಡಿ ಪ್ರ. ಭಂಡಾರ, ಬೆಂಗಳೂರು. ೨-೦

ಶಿವಯೋಗಿ ಶಿವಾಚಾರ್ಯರು ಬರೆದ ಷಟ್ಸ್ಥಲ ವಿವರಣೆಯುಳ್ಳ ಸುಪ್ರಸಿದ್ಧವಾದ ಸಂಸ್ಕೃತ ಸಿದ್ಧಾಂತ ಶಿಖಾಮಣಿಯನ್ನು ಸರಳ ರಗಳೆಯಲ್ಲಿ ಅನುವಾದಿಸಿದ್ದಾರೆ.

ಲಿಂಗಲೀಲಾವಿಲಾಸ ಚಾರಿತ್ರ — **ಕಲ್ಲಮಠದ ಪ್ರಭುದೇವ**

ಮೃತ್ಯುಂಜಯಸ್ವಾಮಿಗಳು, ಮುರಘಾಮಠ, ಧಾರವಾಡ. ೫-೦

ಕಲ್ಲಮಠದ ಪ್ರಭುದೇವರು ವೀರಶೈವ ವಚನಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಟೀಕೆಯನ್ನು ಬರೆದ ಪುಸ್ತಕ. ಕವಿ ಕೃತಿ, ವಿಷಯಗಳ ಬಗ್ಗೆ ವಿಸ್ತಾರವಾದ ಮುನ್ನುಡಿ ಇದೆ. ಸಂಪಾದಕರು : ಎಸ್. ಎಸ್. ಭೂಸನೂರಮಠ.

೩ ಕವನ

ಸಂಗ್ರಹಗಳು

ಉದಯ — ಲಕ್ಷೆಟ್ಟಿ ಬಾಳೇಶ (ಸಂ.)

ಉದಯ ಪ್ರಕಾಶನ, ಗೋಕಾಕ. ೦-೮

ಕನ್ನಡ ರಾಜ್ಯೋದಯದ ಕಾಲಕ್ಕೆ ಪ್ರಕಟವಾದ ಕವನಸಂಗ್ರಹ.

ಕರ್ನಾಟಕ ದರ್ಶನ — ಇಂಚಲ, ಎಸ್. ಡಿ. (ಸಂ)

ಚೇತನ ಪ್ರಕಾಶನ, ಬೆಳಗಾವಿ. ೧-೦

ನಾಡುನುಡಿಗಳಿಗೆ ಸಂಬಂಧಿಸಿ ಉತ್ತರಕರ್ನಾಟಕದ ಕವಿಗಳ ಕವನಗಳಿವೆ.

ಜನತಾ ಗೀತೆಗಳು — ಗದ್ದಗಿಮಠ, ಬಿ. ಎಸ್. (ಸಂ.)

ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿ. ಧಾರವಾಡ. ೧-೮

ಉತ್ತರ ಕರ್ನಾಟಕ ವಿಭಾಗದ ಹಳ್ಳಿಯ ಹಾಡುಗಳ ಸಂಕಲನ. ಜನಪದ ಸಾಹಿತ್ಯ ವಿಚಾರದಲ್ಲಿ ಗದ್ದಗಿಮಠರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಪಿ. ಎಚ್. ಡಿ. ದೊರೆತಿದೆ.

ಜೋಗದ ಝೋಕ್ — ಸಂಕಲನ

ತರುಣರ ಸಂಘ ಗೊಂಡೇದಹಳ್ಳಿ (ಚಿಕ್ಕಮಗಳೂರು). ೦-೪

ಜನಪ್ರಿಯ ಜೋಗದ ಹಾಡು ಮತ್ತು ಇತರ ಹಳ್ಳಿಯ ಹಾಡುಗಳಿವೆ.

ನವ್ಯಧ್ವನಿ — ಗೋಕಾಕ, ವಿ. ಕೃ., ಕಣವಿ, ಚೆನ್ನವೀರ (ಸಂ.)

ಸಮಾಜ ಪುಸ್ತಕಾಲಯ, ಧಾರವಾಡ. ೧-೮

ಹೊಸ ಪೀಳಿಗೆಯ ಕವನಗಳ ಸಂಕಲನ. ನವ್ಯ ಕವಿತೆಗಳ ಮೇಲೆ ಸುದೀರ್ಘ ಮುನ್ನುಡಿ ಇದೆ.

ಪದ್ಯಾಂಜಲಿ — ರಾಜರತ್ನಂ ಜಿ. ಪಿ. (ಸಂ.)

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ, ಬೆಂಗಳೂರು. ೦-೧೨

ಕಾಲೇಜಿನ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳ ೪೦ ಕವನಗಳ ಸಂಗ್ರಹ.

ವಿಜಯ ದುಂದುಭಿ — ಸನದಿ, ಬಿ. ಎ. (ಸಂ)

ಚೇತನ ಪ್ರಕಾಶನ, ಬೆಳಗಾವಿ. ೦-೧೨

ಬೆಳಗಾವಿ ಜಿಲ್ಲೆಯ ಹಿರಿ-ಕಿರಿಯ ಕವಿಗಳ ಭಾವಗೀತೆಗಳಿವೆ.

ಭಾವ ಗೀತೆಗಳು

ಕ್ರೀಡಾಂಗಣ — ಗದಗಕರ, ಎಸ್. ಎಸ್.

ಸಮಾಜ ಪುಸ್ತಕಾಲಯ, ಧಾರವಾಡ. ೦-೧೫

ಪ್ರಸಿದ್ಧ ವ್ಯಕ್ತಿಗಳಿಗೆ ಶ್ರದ್ಧೆಯನ್ನು ಸಲ್ಲಿಸಿರುವ ಪದ್ಯಗಳು ಹೆಚ್ಚಾಗಿ ಇವೆ. ಪ್ರಥಮ ಕೃತಿ.

ಚಿನ್ಮಯಿ — ಹಕಾರಿ, ದೇವೇಂದ್ರ.

ಕನ್ನಡ ಕೋಟೆ, ಸೊಲ್ಲಾಪುರ. ೦-೧೪

ಜೀವನಾದ — ಪುರಾಣಿಕ, ಕೃಷ್ಣಮೂರ್ತಿ

ಸುದರ್ಶನ ಪ್ರಕಾಶನ, ತಿಪಟೂರು. ೧-೮

ದೀಪ ಧಾರಿ — ಕಣವಿ, ಚೆನ್ನವೀರ

ಸುರುಚಿ ಪ್ರಕಾಶನ, ಮೈಸೂರು. ೧-೪

ರೊಮ್ಯಾಂಟಿಕ್ ಮತ್ತು ನವ್ಯಮಾರ್ಗದ ಸಂಧಿಕೂಟದ ಕವನಗಳಿವೆ.

ದೇವಶಿಲ್ಪಿ — ಶಿವರುದ್ರಪ್ಪ, ಜಿ. ಎಸ್.

ಶಾರದಾ ಮಂದಿರ, ಮೈಸೂರು. ೧-೪

ಬದುಕು-ಬಯಲು — ಹೇರೂರು, ಮೆನಸ್

ಕರ್ಣಾಟಕ ಪ್ರಕಟನಾಲಯ, ಹೇರೂರು ?

ಬಾಳ ಗೆಳತಿ — ಶಂಕರನಾರಾಯಣ ನಾವಡ, ಅಮ್ಮೆಂಬಳ

ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು, ದ. ಕ. ೦-೧೨

ದಾಂಪತ್ಯ ಹಾಗೂ ಶೃಂಗಾರ ಕವನಗಳಿವೆ. ಎರಡನೆಯ ಕೃತಿ.

ಋಷಿ ನೀಡಿದ ಸ್ಫೂರ್ತಿ — ರಾಮಚಂದ್ರಶರ್ಮ, ಕೆ.

ಭಾರತೀ ಪ್ರಕಾಶನ, ಮೈಸೂರು. ೧-೦

ಏಳು ನವ್ಯ ಕತೆಗಳೂ, ಒಂದು ಪದ್ಯನಾಟಕವೂ ಇವೆ. ದ್ವಿತೀಯ ಸಂಕಲನ.

ಬೇವು ಬೆಲ್ಲ — ಸೀತಾರಾಮಭಟ್ಟ, ಪ.

ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ. ೧-೦

ಭಗ್ನ ಕವಿ — ರಂಗನಾಥ, ಎನ್.

ಕೇಶವ ಪ್ರಕಟನಾಲಯ, ಬೆಂಗಳೂರು. ೦-೮

ವಿರಹ ಕವಿತೆಗಳು. ಕಾವ್ಯನಾಮ 'ಕುಮುದ ಪ್ರಿಯ'.

ಮಕ್ಕಳ ಪದ್ಯಗಳು — ದೇಸಾಯಿ, ದಿನಕರ

ಕೆನರಾ ವೆಲ್‌ಫೇರ ಟ್ರಸ್ಟ, ಅಂಕೋಲಾ. ೦-೧೨

ತಿಪ್ಪಾ ಭಟ್ಟನ ಚಿತ್ರಣವುಳ್ಳ ಪದ್ಯಗಳೂ ಕಥನ ರೂಪದ ಕವಿತೆಗಳೂ ಇವೆ.

ಮಂಗಳಾರತಿ — ನಾರಾಯಣಶೆಟ್ಟಿ, ಸು.

ಲೇಖಕರೇ ಪ್ರಕಾಶಕರು, ಮೈಸೂರು.

ಮುಕ್ತಕಂಠ — ಬೇಂದ್ರೆ, ದ. ರಾ.

ಸಮಾಜ ಪುಸ್ತಕಾಲಯ, ಧಾರವಾಡ. ೧-೮

ಅಧ್ಯಾತ್ಮದ ಸೆಳವು, ಕಾವು ಇರುವ ಕವನಗಳು ಹೆಚ್ಚಿಗೆ ಇವೆ.

ರನ್ನ ಚುಕ್ಕಿ — 'ಜ. ಚ. ನಿ.'

ಶ್ರೀಶೈಲ ಜ. ನಿ. ಪುಸ್ತಕ ಭಂಡಾರ, ಬೆಂಗಳೂರು. ೦-೮

ವೇದಾಂತ ಮತ್ತು ಭಕ್ತಿ ಭಾವಗಳನ್ನೊಳಗೊಂಡ ಕವನಗಳಿವೆ.

ರಸಿಕ ಪಕ್ಷಿ — ಎಲ್ಲಟ್ಟಿ, ಬ. ಗಿ.

ಸ್ನೇಹ ಪ್ರಕಾಶನ, ಶಮನೇವಾಡಿ. ೧-೦

ವಿದಾಯ — ದಿವಂಗತ ರಾಮಚಂದ್ರ, ಯರ್ಮುಂಜ

ಕೆ. ಗೋವಿಂದ ಜೋಯಿಸ, ಕಬಕ (ದ. ಕ.) ೧-೦

ಸೂರ್ಯಪಾನ **ಬೇಂದ್ರೆ, ದ. ರಾ.**

ಸಮಾಜ ಪುಸ್ತಕಾಲಯ, ಧಾರವಾಡ. ೨-೦

ಕವಿವರರಿಗೆ ೬೦ ವರ್ಷ ತುಂಬುತ್ತಿರುವ ಸಮಯದಲ್ಲಿ ಪ್ರಕಟವಾದ ಸಂಗ್ರಹ.

ಸ್ನೇಹ ಸೌರಭ **ಇಂಚಲ, ಎಸ್. ಡಿ.**

ಲೇಖಕರಿಂದ ಪ್ರಕಾಶಿತ, ಬೆಳಗಾವಿ. ೧-೦

ಹಲವು ಪ್ರಸಿದ್ಧ ವ್ಯಕ್ತಿಗಳಿಗೆ ಸಲ್ಲಿಸಿದ ಕವನ ಕಾಣಿಕೆಗಳನ್ನು ಒಳಗೊಂಡಿದೆ.

ಹೃದಯ ಗೀತಗಳು **ಇದಿನಬ್ಬ, ಬಿ. ಎಂ.**

ಲೇಖಕರು, ಮಂಗಳೂರು. ೦-೧೦

ಹೃದಯ ಸಮುದ್ರ **ಬೇಂದ್ರೆ, ದ. ರಾ.**

ಸಮಾಜ ಪುಸ್ತಕಾಲಯ, ಧಾರವಾಡ. ೧-೮

ಅರವಿಂದ ಪ್ರಣಾಲಿಯ ಅನುಭಾವದ ಕವನಗಳ ಸಂಗ್ರಹ.

ಖಂಡ ಕಾವ್ಯಗಳು

ಕಂಬನಿ **ರಂಗನಾಥ ಎನ್. (ಅನು.)**

ಸಾಹಿತ್ಯ ಸೇವಾಸದನ, ಬೆಂಗಳೂರು. ೧-೮

ಲೌಕಿಕ ಪ್ರೇಮದ ವಿವಿಧ ಭಾವಗಳನ್ನು ಪ್ರದರ್ಶಿಸಿದ, ಜಯಶಂಕರ ಪ್ರಸಾದರ 'ಆಂಸೂ' ಎಂಬ ಹಿಂದೀ ಕಾವ್ಯದ ಅನುವಾದ.

ಶಿವಲೇಶ್ಯೆ **ಕಿನ್ನಿಗೋಳಿ, ಅ. ಗೌ.**

ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ. (ದ. ಕ.) ೧-೮

'ಮಿಶ್ರಛಂದ'ದಲ್ಲಿ ರಚಿತವಾದ ಐತಿಹಾಸಿಕ ಕಾವ್ಯ. ಶಿವಾಜಿ ಅಫಝುಲ್ ಖಾನರ ಯುದ್ಧಪ್ರಸಂಗ ಇದರ ಕಥಾವಸ್ತು.

೪ ನಾಟಕ

ಗೀತ ನಾಟಕಗಳು

ಅಂಗುಲೀಮಾಲ **'ಪ್ರಭುಶಂಕರ'**

ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೧-೦

ದರೋಡೆಕೋರನಾದ ಅಂಗುಲೀಮಾಲನು ಬುದ್ಧನ ಕರುಣೆಗೊಳಗಾಗಿ ಕೃತಾರ್ಥನಾದ ಕಥಾವಸ್ತು ಇದೆ. ಗೀತ ರೂಪಕದ ವಿಚಾರದಲ್ಲಿ ಪು. ತಿ. ನ. ಅವರ ಮುನ್ನುಡಿ ಇದೆ. ಬೆಂಗಳೂರ ಆಕಾಶವಾಣಿಯಿಂದ ಪ್ರಸಾರಿತ.

ಬೇಡರ ಕಣ್ಣಪ್ಪ **ವೀರಭದ್ರನಾಯಕ, ಬಿ.**

ಆರ್. ವಿಟ್ಠಪ್ಪ ಶೆಣೈ & ಸನ್ಸ, ಕಾರ್ಕಳ (ದ. ಕ.) ೦-೧೦

ಪ್ರಸಿದ್ಧ ಶಿವಭಕ್ತನಾದ ಬೇಡರ ಕಣ್ಣಪ್ಪನ ಕಥೆಯನ್ನು ಯಕ್ಷಗಾನ ರೂಪದಲ್ಲಿ ಅರ್ಥ ಸಹಿತ ಹೇಳಿದ್ದಿದೆ. ಕಾಳಹಸ್ತಿ ಪುರಾಣವೆಂದೂ ಇದಕ್ಕೆ ಹೆಸರು.

ಹರಿಣಾಭಿಸರಣ **ನರಸಿಂಹಾಚಾರ್, ಪು. ತಿ.**

ಶಾರದಾ ಮಂದಿರ, ಮೈಸೂರು. ೧-೪

ಸೀತಾಪಹರಣದ ಕಥೆಯುಳ್ಳ, ಸ್ವರ ಪ್ರಸ್ತಾರದೊಡನೆ ರಚಿತವಾದ ಕೃತಿ.

ಪೌರಾಣಿಕ-ಐತಿಹಾಸಿಕ

ಏಕಲವ್ಯ **ರಾಮರಾವ, ಬಿ. ಎಸ್. (ಅನು.)**

ಲೇಖಕರಿಂದ ಪ್ರಕಾಶಿತ, ಬೆಂಗಳೂರು. ೧-೦

ಕೈಲಾಸಂರವರ Purpose ನಾಟಕದ ಕನ್ನಡಾನುವಾದ.

ಕನ್ನಡ ಉತ್ತರ ರಾಮಚರಿತ್ರೆ **ಕೃಷ್ಣಮೂರ್ತಿ, ಕೆ. (ಅನು.)**

ಶಾರದಾ ಮಂದಿರ, ಮೈಸೂರು. ೨-೮

ಭವಭೂತಿಯ ಈ ಸಂಸ್ಕೃತ ನಾಟಕದ ಯಥಾನುವಾದ. ಪದ್ಯಗಳ ಅನುವಾದದಲ್ಲಿ ಅರ್ಥಯಮಕಕ್ಕೆ ಮಹತ್ವ ಕೊಟ್ಟಿದ್ದಾರೆ. ಕವಿ ಕೃತಿಗಳ ಮೇಲೆ ಅನುವಾದಕರ ವಿಮರ್ಶಾತ್ಮಕ ಪೀಠಿಕೆ ಇದೆ.

ಕನ್ನಡ ಮಾಳವಿಕಾಗ್ನಿ ಮಿತ್ರ — **ಪರಮೇಶ್ವರಭಟ್ಟ, ಎಸ್. ವಿ. (ಅನು.)**

ಶಾರದಾ ಮಂದಿರ, ಮೈಸೂರು. ೧-೦

ಕಾಳಿದಾಸನ ಆದ್ಯ ನಾಟಕದ ಯಥಾನುವಾದ.

ಕುಮ್ಮಟ ವಲ್ಲಭ — **ಭೂಪಾಲಂ, ವಸುದೇವ**

ಶಶಿ ಪ್ರಕಾಶನ, ಬೆಂಗಳೂರು. ೧-೪

ಕುಮಾರ ರಾಮನ ಕಥೆಯನ್ನು ಆಧರಿಸಿ ಬರೆದ ನಾಟಕ. ಜಾತಿ-ಪಂಥವನ್ನು ಮೀರಿದ ಪ್ರಣಯ ಮತ್ತು ಅದರ ದುರಂತದ ಚಿತ್ರಣವಿದೆ.

ಕುರುಕುಲ ಕಲಹಂ — **ಹನೂಮಾನ್, ವೆಂಕಟರಾಯ (ಅನು)**

ಕ. ರಾ. ಲಕ್ಷ್ಮೀಕಾಂತಯ್ಯ, ದಾವಣಗೆರೆ. ೧-೮

ಮಹಾಭಾರತದ ಕಥೆಗಳನ್ನೊಳಗೊಂಡ, ಭಾಸನ ಐದು ಏಕಾಂಕಗಳ ಅನುವಾದವನ್ನು ಹಳಗನ್ನಡದಲ್ಲಿ ಮಾಡಿದ್ದಾರೆ.

ನ್ಯಾಯ ಮಂತ್ರಿ — **‘ ತಿರುಕ ’**

ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ. ೧-೮

ಅಶೋಕನ ಮಂತ್ರಿ ಶಿಶುಪಾಲಶರ್ಮನ ನ್ಯಾಯನಿಷ್ಠುರತೆಯನ್ನು ತೋರಿಸುತ್ತದೆ.

ಬ್ರಹ್ಮವಾದಿನಿ — **ವೆಂಕಟರಾಮಯ್ಯ, ಸಿ. ಕೆ.**

ಸತ್ಯಶೋಧನ ಪು. ಭಾ., ಬೆಂಗಳೂರು. ೧-೧೪

ಇಪ್ಪತ್ತು ವರುಷಗಳ ಹಿಂದೆ ರಚಿತವಾದ ಈ ನಾಟಕ ಭಾರತೀಯ ಸ್ತ್ರೀತ್ವದ ಆದರ್ಶವನ್ನು ತೋರಿಸುತ್ತದೆ. ಮಹಾಭಾರತದಲ್ಲಿ ಬಂದಿರುವ ಸುಭ್ರೂ ಎಂಬ ವಿರಾಗಿನಿಯ ವಿಶ್ವಪ್ರೇಮದ ಚಿತ್ರವಿದೆ.

ಬಿಜ್ಜ ಮಹಾದೇವಿ — **ಲಕ್ಮೆ, ಮ. ಶಿ.**

ವೀರಶೈವ ಸಾಹಿತ್ಯ ಸಂಸ್ಕೃತಿ ಪ್ರ. ಸಮಿತಿ, ಬೆಳಗಾಂವಿ. ೦-೮

ಓರ್ವ ಶಿವಶರಣೆಯ ಮುಗ್ಧ ಶಿವಭಕ್ತಿಯನ್ನು ತೋರಿಸುವ ಚಿಕ್ಕ ನಾಟಕ.

ಹರಿಶ್ಚಂದ್ರ ರಂಗಣ್ಣ, ಎಸ್. ವಿ.

ಶಾರದಾ ಮಂದಿರ, ಮೈಸೂರು. ೧-೮

ರಾಘವಾಂಕನನ್ನು ಅನುಸರಿಸಿ ಬರೆದ ಗದ್ಯಕಥನ ನಾಟಕ.

ಹರಿಶ್ಚಂದ್ರ ರೂಪಕಂ ನಂಜುಂಡಪ್ಪ, ಬಿ.

ನವೋದಯ ಸಾಹಿತ್ಯ ಮಂದಿರ, ಮೈಸೂರು. ೨-೦

ನಾಟಕೀಯ ಸನ್ನಿವೇಶ ಸಂಭಾಷಣೆಗಳಿಂದ ಕೂಡಿದ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಕವಿವಾಣಿಯಲ್ಲಿಯೆ ನಾಟಕ ರೂಪವಾಗಿ ಪರಿವರ್ತಿಸಿದ್ದಾರೆ.

ಸಾಮಾಜಿಕ ನಾಟಕಗಳು

ಅಭಾಗಿನಿ 'ಸುವರ್ಣ'

ಲೇಖಕರಿಂದ, ಮುಂಬಯಿ. ೧-೦

ಬಾಲವಿಧವೆಯೊಬ್ಬಳ ಕರುಣಾಜನಕ ಸ್ಥಿತಿಯನ್ನು ಚಿತ್ರಿಸುತ್ತದೆ.

ಅಂಚೆ ಮನೆ ಗಣೇಶಶರ್ಮಾ, ರಾ. (ಅನು.)

ನೇತ್ರಾವತಿ ಪ್ರಕಾಶನ, ಬೆಂಗಳೂರು. ೦-೧೨

ರವೀಂದ್ರನಾಥ ಠಾಕೂರರ Post office ನಾಟಕದ ಅನುವಾದ.

ಕುಲ ಛಲ ಹಿರೇಮಠ, ಮಹಾಂತೇಶಶಾಸ್ತ್ರಿ

ವಿಜಯ ಮಹಾಂತೇಶ ಮುದ್ರಣ, ಗದಗ. ೨-೦

ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಪಟ್ಟ ನಾಟಕ. ಲೇಖಕರ ೧೨ನೆಯ ಕೃತಿ.

ಕೂಲಿ ಸುಬ್ಬರಾವ, ಅ. ನ.

ನೀಲಕಂಠೇಶ್ವರ ನಾಟ್ಯ ಸಂಘ, ಹೆಗ್ಗೋಡು. ೧-೦

ಶ್ರಮಜೀವಿಯ ಸಮಸ್ಯೆಯನ್ನು ಬಿಡಿಸಲೆಳಸಿರುವ ನಾಟಕ.

ಕೈಲಾಸದಲ್ಲಿ ಕಮ್ಯುನಿಷ್ಟರು ವೆಂಕಟರಾಜ, ಎಸ್.

ಶ್ರೀಕೃಷ್ಣ ಪ್ರಕಾಶನ, ಉಡುಪಿ. ೧-೦

ಹೆಸರೇ ಸೂಚಿಸುವಂತೆ ಇದೊಂದು ವಿಡಂಬನಾತ್ಮಕ ನಾಟಕ.

ಚಿತ್ರಪ್ರಮಾದ — **ರಾಮರಾವ, ಎಂ.**

ಶಾರದಾ ಮಂದಿರ, ಮೈಸೂರು. ೦-೧೨

ಅನುಮಾನದ ಅವಾಂತರವನ್ನು ಚಿತ್ರಿಸುವ ಮೊಲಿಯರನ Self deceived husband ಎಂಬ ನಾಟಕದ ರೂಪಾಂತರ.

ದೇಶ ಧುರೀಣ ? — **ಶಾಮಭಟ್ಟ, ಎಸ್. ಕೆ.**

ಲೇಖಕರಿಂದ, ? ೧-೦

ಜನಸೇವೆಯ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುವ ಧುರೀಣರ ಟೀಕೆ ಇದೆ.

ಭೂದಾನ — **ಹೇರೂರ, ರಾಚಪ್ಪ**

ವಿಜಯ ವಿದ್ಯಾಲಯ ಹೈಸ್ಕೂಲ, ತಾಂಡೂರ. ೧-೦

ಭೂದಾನ ಯಜ್ಞವನ್ನು ಚಿತ್ರಿಸುವ ನಾಟಕ.

ರುದ್ರಿ ಮನೆ — **ಸ್ವಾಮಿ, ಮಹಾಮನೆ**

ಮಹಾಮನೆ ಪ್ರ., ಮೈಸೂರು. ೧-೮

ಶೋಕಚಕ್ರ — **ಆದ್ಯ, ರಂಗಾಚಾರ್ಯ**

ಶ್ರೀರಂಗ ಸಾರಸ್ವತ ಪ್ರಕಾಶನ, ಧಾರವಾಡ. ೧-೮

ಗಾಂಧೀಜಿ ಮರಣದ ನಂತರದ, ದೇಶವಲ್ಲಿಯ ರಾಜಕೀಯ ಸಾಮಾಜಿಕ ಪ್ರವೃತ್ತಿಗಳನ್ನು ಚಿತ್ರಿಸುವ ಮಾರ್ಮಿಕ ನಾಟಕ. ಲೇಖನಾಮ : ಶ್ರೀರಂಗ.

ಸ್ತ್ರೀರತ್ನ ಅರ್ಥಾತ್ ಸತಿ ಧರ್ಮ — **ಮಾಂಡ್ರೆ, ಮಾ. ತು.**

ಲೇಖಕರು, ಹೊಳೆಆಲೂರ. ೧-೮

ಸ್ತ್ರೀಯ ಶೀಲರಕ್ಷಣೆ ಈ ‘ ಕಂಪೆನಿ ’ ನಾಟಕದ ವಸ್ತುವಾಗಿದೆ.

ಏಕಾಂಕ-ಪ್ರಹಸನಗಳು

ಅಶ್ವಮೇಧ — **ಆದ್ಯ, ರಂಗಾಚಾರ್ಯ**

ಲಲಿತ ಸಾಹಿತ್ಯಮಾಲೆ, ಧಾರವಾಡ. ೧-೮

ಶ್ರೀರಂಗರು ಇಪ್ಪತ್ತು ವರುಷಗಳಿಂದ ಬರೆದ ಏಕಾಂಕಗಳನ್ನು ಪ್ರಾತಿನಿಧಿಕ ವೆನಿಸುವಂತೆ ಆಯ್ದು ಕೊಡಲಾಗಿದೆ. ವಿ. ಎಂ. ಇನಾಂದಾರರ ಮುನ್ನುಡಿ.

ಏಲ್ ಫೈಲ್ — ಮೂರ್ತಿ, ಕೈ. ನ.

ಪೂರ್ಣಿಮಾ ಸಾಹಿತ್ಯ ಮಂದಿರ, ಮೈಸೂರು. ೦-೮

ಸಾಹಿತಿಯಾಗಬೇಕೆನ್ನುವವನ ಪಾಡು ಚಿತ್ರಿತವಾಗಿದೆ.

ಧನೋರೋಗ — ದಾಶರಥಿ, ದೀಕ್ಷಿತ್

ರಮಾ ಪ್ರಕಾಶನ, ಬೆಂಗಳೂರು. ೧-೦

ಜಿಪುಣನೊಬ್ಬನನ್ನು ಹಾದಿಗೆ ತರಲು ಹೂಡಿದ ತಂತ್ರ ಇಲ್ಲಿವೆ. ಸರಳ ರಗಳೆಯಲ್ಲಿ ಬರೆದ ಬೇರೆ ಕಿರು ನಾಟಕಗಳೂ ಇವೆ.

ನಗಬೇಕೊ, ಅಳಬೇಕೊ ! — ಹೊಸಮನಿ, ಬಾಲಚಂದ್ರ

ಭಾರತೀ ಸಾಹಿತ್ಯ ಭಂಡಾರ, ಯರನಾಳ. ೦-೮

ಪದ್ಮಾವತಿ ಪರಿಣಯ — ' ಪರ್ವತವಾಣಿ '

ಕಮಲ ಪರ್ವತವಾಣಿ (ಪ್ರ.), ಬೆಂಗಳೂರು. ೦-೮

ಪಾಪದ ಪ್ರತಿಫಲ — ಶಿವರಾಜ, ಕೆ.

ಶಿವರಾಜ ಪ್ರಕಾಶನ, ಸವಣೂರ. ೦-೮

ಮರುಳು ಮದುವೆ — ಕೃಷ್ಣಮೂರ್ತಿ, ಕೆ. ಎಸ್.

ಡಿ. ವಿ. ಕೆ. ಮೂರ್ತಿ, ಮೈಸೂರು. ೦-೧೦

ಹಾಸ್ಯಪ್ರಧಾನವಾದ ಈ ಪ್ರಹಸನದ ಮೂಲಭಾವ ಮೊಲಿಯರನದು.

ಯಾರ ಹೆಂಡ್ತಿ ಮತ್ತು ಮಾಂಗಲ್ಯ ಭಾಗ್ಯ — ಗುಂಡಣ್ಣ, ಕೆ.

ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು. ೧-೪

ಎರಡು ಹಾಸ್ಯ ನಾಟಕಗಳಿವೆ.

ಯಾವ ನಾಟಕ — ಜೋಶಿ, ಎಸ್. ಕೆ.

ಆನಂದ ಸಾಹಿತ್ಯ ಮಂದಿರ, ಗದಗ, ೧-೦

ಉತ್ತರ ಕರ್ನಾಟಕದ ಆಡು ಮಾತಿನ ಐದು ಏಕಾಂಕಗಳ ಸಂಗ್ರಹ.

ರೋಗಾಲಾಪನೆ ‘ಪರ್ವತವಾಣಿ’

ಕಮಲ ಪರ್ವತವಾಣಿ, ಬೆಂಗಳೂರು. ೦-೧೦

ಮೊಲಿಯರನ The Imaginery Invalidದ ರೂಪಾಂತರ.

ವಾಸಂತಿಯ ತಂತ್ರ ಮತ್ತು ಸಿಂಧೀ ಡ್ರೆಸ್ ಕೈವಾರ, ರಾಜಾರಾವ

ಎಚ್. ಎನ್. ರಾವ್ ಬ್ರದರ್ಸ, ಬೆಂಗಳೂರು. ೧-೪

ಎರಡು ಹಾಸ್ಯಪೂರಿತ ಏಕಾಂಕಗಳು. ಮೊದಲಿನದಕ್ಕೆ ಜೆ. ಎಂ. ಬ್ಯಾರಿಯ The twelve pound look ಎಂಬುದು ಆಧಾರ. ಇನ್ನೊಂದು, ಹೆಂಗುಸರ ನಾಟಕ.

ವಿಷಮ ಘಳಿಗೆ ಸುವರ್ಣ, ಎಸ್. ಆರ್.

ಲೇಖಕರು, ಮುಂಬಯಿ. ೦-೮

ಮುಂಬಯಿ ಮದುವಣಿಗನ ಮೋಸವು ಹೊರಬಿದ್ದ ಕಥೆ ಇದೆ.

ರೇಡಿಯೊ ನಾಟಕಗಳು

ಮಹಾ ಸಾಮ್ರಾಜ್ಯ ಶಿವಸ್ವಾಮಿ, ಎಸ್. ಎನ್.

ಸಾಧನಾ ಪ್ರಕಾಶನ, ಹೈದರಾಬಾದ. ೦-೬

ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ, ವಿಶಿಷ್ಟ ತಂತ್ರದ ನಾಟಕ.

ಹೃದಯಾಂತರಾಳ ಶಿವಸ್ವಾಮಿ, ಎಸ್. ಎನ್.

ಶಾರದಾ ಪ್ರ., ಬೆಂಗಳೂರು. ೧-೪

ಆಕಾಶವಾಣಿಯ ತಂತ್ರದ ಅರಿವನ್ನು ಮಾಡಿಕೊಡುವ ೫ ಪ್ರಸಾರ ನಾಟಕಗಳಿವೆ.

೫ ಕಥನ

ಸಣ್ಣ ಕತೆಗಳು

ಅತಿ ದೂರದ ಜಗತ್ತಿನಲ್ಲಿ **ಹೆಗಡೆ ಬಂಧುಗಳು (ಅನು.)**

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ. ೦-೧೨

ವಿವಿಧ ದೇಶಗಳಿಂದ ಆಯ್ದ ಎಂಟು ಕತೆಗಳ ಅನುವಾದ.

ಅಮೃತ ಕುಂಭ **ನಿವೇದಿತಾ, ಪ್ರಭುದಾಸಿ (ಮೂಲ)**

ಪ್ರದೀಪ ಕಾರ್ಯಾಲಯ, ಧಾರವಾಡ. ೧- ೦

ಆಧ್ಯಾತ್ಮಿಕ ಸಂಕೇತವಿರುವ ರೂಪಕ ಕತೆಗಳ ಸಂಗ್ರಹ. ಮೂಲವು ಮರಾಠಿಯಲ್ಲಿದ್ದು ವಿನೀತ ರಾಮಚಂದ್ರರಾಯರು ಅನುವಾದಿಸಿದ್ದಾರೆ.

ಅವಳೇ ನನ್ನ ಪ್ರೇಯಸಿ **ಅಣ್ಣಿಗೇರಿ, ಕೆ. ಎಲ್.**

ಕನ್ನಡ ಸಾಹಿತ್ಯ ಪ್ರ., ಗದಗ. ೦-೧೨

ಉದಯೋನ್ಮುಖ ಕತೆಗಾರರ ಪ್ರಥಮ ಸಂಕಲನ.

ಅಂಕುರ **ನೀಲಮ್ಮ, ಎಂ. ಎ.**

ವಿವೇಕ ಸಾಹಿತ್ಯಮಾಲೆ, ಮಂಗಳೂರು. ೧-೦

ತಾತ್ವಿಕ ಹಿನ್ನೆಲೆಯಲ್ಲಿ ರಚಿತವಾದ ಆರು ಕಥೆಗಳಿವೆ.

ಎಲ್ಲೂ ಇಲ್ಲದ ಊರು **ರಾಮರಾವ, ಎಂ. (ಪರಿ.)**

ಸತ್ಯಶೋಧನ ಪು. ಭಂ., ಬೆಂಗಳೂರು. ೧-೮

ಗ್ರಿಮ್ ಸಹೋದರರ ೫೦ ಹನಿಗತೆಗಳನ್ನು ನಮ್ಮ ದೇಶದ ಆವರಣಕ್ಕೆ ಹೊಂದಿಸಿಕೊಂಡು ಬರೆಯಲಾಗಿದೆ.

ಕನಸಿನ ಕನ್ನಡಿ **ಜೋಶಿ, ವೆಂ. ಮು.**

ಸಮಾಜ ಪುಸ್ತಕಾಲಯ, ಧಾರವಾಡ. ೧-೮

ತರುಣ ಕತೆಗಾರರ ಮೂರನೆಯ ಸಂಕಲನ.

ಕಪ್ಪು ಹುಡುಗಿ — ಕುಲಕರ್ಣಿ, ದ. ಬಾ.

ಲಲಿತ ಸಾಹಿತ್ಯಮಾಲೆ, ಧಾರವಾಡ. ೦-೧೨

ಈ ಸಂಕಲನದ ಮೊದಲ ಕತೆಗೆ ಜಾಗತಿಕ ಸ್ಪರ್ಧೆಯ ಕನ್ನಡ ವಿಭಾಗದಲ್ಲಿ ಬಹುಮಾನ ದೊರೆತಿದೆ.

ಕಲಾಧರ — ಬೆಳ್ಳಾವೆ, ನರಹರಿಶಾಸ್ತ್ರಿ

ಬೆಳ್ಳಾವೆ ಪುಸ್ತಕಾಲಯ, ಬೆಂಗಳೂರು. ೧-೪

ನಾಟಕಕಾರ ಬೆಳ್ಳಾವೆಯವರು ಇಲ್ಲಿ ಐತಿಹಾಸಿಕ ೮ ಕಥೆಗಳನ್ನು ಕೊಟ್ಟಿದ್ದಾರೆ.

ಗುರು ಕೃಪೆ — ಕೋನೇರಿಪುರ, ಎಸ್. ವಿ.

ಭಾರತೀ ಸಾ. ಭಾಂಡಾರ, ಯರನಾಳ. ೦-೮

ಜೀವನ — ಅಶ್ವತ್ಥನಾರಾಯಣರಾವ್, ಕೆ.

ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೨-೦

ಪ್ರಸಿದ್ಧ ಕತೆಗಾರರೆನಿಸಿದ ಅಶ್ವತ್ಥರ ೩ನೆಯ ಸಂಕಲನ. ಕಾಶಿಯು ಹೆಚ್ಚಾಗಿ ಈ ಕತೆಗಳಿಗೆ ಹಿನ್ನೆಲೆಯನ್ನು ಒದಗಿಸಿದೆ.

ತಾಯಿ ಮಗು — ಗೋಗಿ, ಸರೋಜಿನಿ

ಅಕ್ಕನ ಬಳಗ, ಹಲಸಂಗಿ. ೦-೧೪

ದಿ. ಮಧುರಚೆನ್ನರ ಮಗಳಾದ ಸರೋಜಿನಿ, ತಾಯಿ ಮಗುವಿನ ಸಂಬಂಧದಲ್ಲಿ ಭಾವ ಕತೆಯೊಂದನ್ನು ಬರೆದಿದ್ದಾರೆ.

ತೆರೆಮರೆಯ ದೀವಿಗೆಗಳು — ಹುರಳಿ, ಭೀಮರಾವ

ಇಂಡಿಯನ್ ಇಂಡಸ್ಟ್ರಿಯಲ್ಸ ಎಂಡ್ ಎಜನ್ಸೀಸ್, ಮಂಗಳೂರು. ೦-೧೪

ದೊಡ್ಡವರು ದೊಡ್ಡ ಕಾರ್ಯವನ್ನು ಸಾಧಿಸುವಲ್ಲಿ ಸಾಮಾನ್ಯರಾದವರು ನೆರವಾಗಿರುತ್ತಾರೆ. ಅಂಥ ನಾಲ್ವರು ಸ್ತ್ರೀಯರ ಕಥೆಗಳಿವು.

ತೇಲಿಹೋದ ಮೋಡ — ಕುಲಕರ್ಣಿ, ಗೀತಾದೇವಿ

ಲಲಿತ ಸಾಹಿತ್ಯ ಮಾಲೆ, ಧಾರವಾಡ. ೧-೮

ಹೆಣ್ಣಿನ ಜೀವನದ ವಿವಿಧ ಮುಖಗಳನ್ನು ಚಿತ್ರಿಸುವ ಕಥಾ ಸಂಗ್ರಹ.

ದುರ್ಗಾ ಮಂದಿರ — **ಉಡುಪ, ಕೆ. ಆರ್. (ಅನು.)**

ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೧ ರೂ.

ಪ್ರೇಮಚಂದರ ಐದು ಉತ್ತಮ ಕತೆಗಳ ಅನುವಾದಿತ ಸಂಕಲನ.

ದೇವರ ಮಹಿಮೆ — **ಸುಬ್ಬರಾವ, ಸುರತ್ಕಲ್**

ಬಾಲಸಾಹಿತ್ಯ ಮಂಡಲ, ಮಂಗಳೂರು. ೦-೧೦

ನನ್ನ ಮನೆಗೆ ನೀ ಚಂದ — **ಪಂಚಾಕ್ಷರಿ, ಎಸ್.**

ದೇವಿರಾ ಮಂದಿರ, ಚೆನ್ನಗಿರಿ. ೧-೦

ವಿದ್ಯಾರ್ಥಿ ದೆಸೆಯಲ್ಲಿರುವ ' ಶ್ರೀಪಂಚ 'ರ ಕತೆಗಳ ಸಂಗ್ರಹ. ಇಂದಿನ ಸಣ್ಣ ಕತೆಗಳ ಸ್ಥಿತಿ ಗತಿಗಳ ಬಗ್ಗೆ ನಿರಂಜನರ ಮುನ್ನುಡಿ ಇದೆ.

ನಮ್ಮ ಮನೆಯ ದೀಪ — **ನಾಯಕ, ಹಾ. ಮಾ.**

ಉಷಾ ಸಾಹಿತ್ಯಮಾಲೆ, ಮೈಸೂರು. ೧-೦

ಮಗುವೊಂದನ್ನು ಏಕಸೂತ್ರವಾಗಿಟ್ಟುಕೊಂಡಿರುವ ಕಥನರೂಪದ ಗದ್ಯ ಚಿತ್ರಗಳು. ಪು. ತಿ. ನ. ಅವರ ಹೃದ್ಯವಾದ ಮುನ್ನುಡಿ ಇದೆ.

ಬಾಳ ಹನಿ — **' ಬಸವರಾಜ್ದುಮ್ಮಿ ', (ಸಂ)**

ಕಲಾಪ್ರೇಮಿಗಳ ಸಂಘ, ಶಿವಮೊಗ್ಗ. ೦-೧೨

ಬೇರೆ ಬೇರೆ ತರುಣ ಕತೆಗಾರರ ಐದು ಕತೆಗಳಿವೆ.

ಮಹಾತ್ಮಾ — **ಹೆಗಡೆ, ಜಿ. ಆರ್.**; **ಕೋಡಕಣಿ, ಎಸ್. ಎನ್.** (ಅನು.)

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ. ೦-೧೨

ನಾಲ್ಕು ಅಮೇರಿಕನ್ ಕತೆಗಳ ಅನುವಾದಿತ ಸಂಗ್ರಹ.

ಮೂಕ ಪ್ರೇಮ — **ವಿಶಾಲಾಕ್ಷಿ, ನಾರಾಯಣರಾವ**

ಕಾವ್ಯಾಲಯ, ಮೈಸೂರು. ೧-೪

ಮಧ್ಯಮ ವರ್ಗದ ಸಂಸಾರ ಜೀವನದ ಚಿತ್ರಣವುಳ್ಳ, ಎಂಟು ಕತೆಗಳಿವೆ.

ಸಂಗಮ — **ರಾಜಲಕ್ಷ್ಮಿ, ಎನ್. ರಾವ್**

ಸುರುಚಿ ಪ್ರಕಾಶನ, ಮೈಸೂರು. ೧-೧೨

ಹುಚ್ಚರ ರಾಜ್ಯ — **'ಶಿವಕುಮಾರ'**

ಭಾರತೀ ಸಾಹಿತ್ಯ ಭಾಂಡಾರ, ಯರನಾಳ. ೦-೮

ಶ್ಲೇಷ ರೂಪವಾದ ಕಥೆಗಳ ಸಂಕಲನ.

ಇತರ ಕಥನಗಳು

ಅದ್ಭುತ ರಾಮಾಯಣದ ಕಥೆ — **ಪರಮೇಶ್ವರಭಟ್ಟ, ಎಸ್. ವಿ.**

ಲೇಖಕರು, ಮೈಸೂರು. ೧-೦

ಮುದ್ದಣನ ಅದ್ಭುತ ರಾಮಾಯಣದ ಗದ್ಯ ಕಥೆ.

ಅರ್ಜುನ — **ಗಣಪಯ್ಯಶೆಟ್ಟಿ, ಸೀತಾನದಿ**

ಮಂಗಳೂರ ಟ್ರೇಡಿಂಗ್ ಅಸೋಸಿಯೇಶನ್, ಮಂಗಳೂರು. ೧-೦

ಮಹಾಭಾರತದ ಅರ್ಜುನನ ಕಥೆಯನ್ನು ಸರಳ ಗದ್ಯದಲ್ಲಿ ಹೇಳಿದೆ.

ಆದರ್ಶ ಮಹಾಪುರುಷ — **ಕೃಷ್ಣಐಯಂಗಾರ್, ಡಿ.**

ಸುದರ್ಶನಂ ಎಂಡ್ ಕಂಪನಿ, ಬೆಂಗಳೂರು. ೧-೮

ರೈತನ ಸಮಸ್ಯೆಗಳಿಗೆ ಗಮನ ಕೊಟ್ಟಿದ್ದ ಐಯಂಗಾರರು ಇಲ್ಲಿ ರಾಮಚಂದ್ರನ ಕಥೆಯನ್ನು ಸುಲಭ ಸರಣಿಯಲ್ಲಿ ಹೇಳಿದ್ದಾರೆ.

ಗ್ರೀಕರ ಕಥೆಗಳು — **ವೆಂಕಟೇಶಯ್ಯ, ಬಿ. ವಿ. (ಅನು.)**

ಲೇಖಕರು, ಬೆಂಗಳೂರು. ೧-೪

ಚಾರ್ಲ್ಸ್ ಕಿಂಗ್ಸ್ಲೆ ಅವರ Heroes ಎಂಬ ಪುಸ್ತಕದ ಸಂಗ್ರಹ-ಭಾಷಾಂತರ.

ಭಾರತದ ನಾಯಕಮಣಿಗಳು — **ಗುಂಡಪ್ಪ, ಎಲ್.**

ಲೇಖಕರು, ಬೆಂಗಳೂರು. ೧-೮

'ಕನ್ನಡ ಸಾಹಿತ್ಯ ಚಿತ್ರಗಳು' ಇದರ ೩ನೆಯ ಪುಸ್ತಕ. ಪಂಪ, ರನ್ನ ಕುಮಾರವ್ಯಾಸರಿಂದ ಮಹಾಭಾರತದ ಕರ್ಣ ಭೀಷ್ಮ, ಭೀಮ ದುರ್ಯೋಧನ ಮತ್ತು ಅರ್ಜುನ ಧರ್ಮರಾಜರ ಕಥೆಗಳನ್ನು ಸಂಗ್ರಹಿಸಿದ್ದಾರೆ.

ಭಾಸ ಕಥಾಮಂಜರಿ — **ರಾಮಣ್ಣ, ಸೋ. ಕೆಂ.**

ಶಾರದಾ ಮಂದಿರ, ಮೈಸೂರು. ೧-೧೨

ಭಾಸನ ಒಂಬತ್ತು ನಾಟಕಗಳ ಕಥಾಸಾರವಿದೆ.

ರಷ್ಯದ ಜಾನಪದ ಕಥೆಗಳು — **ಸುಂದರ್, ಕೆ. ಟಿ. ಎಸ್.**

ಪೀಪಲ್ಸ ಬುಕ್ ಹೌಸ್, ಮೈಸೂರು. ೧-೮

Russian Folk Tales ಎಂಬ ಕೃತಿಯ ಶುದ್ಧ ಅನುವಾದ.

ರಾಮಾಯಣದ ವಿಭೂತಿ ಪುರುಷರು — **ಗುಂಡೂರಾಮಯ್ಯ, ರು. ನಾ.**

ಸಾಹಿತ್ಯ ನಿಕೇತನ, ಬೆಂಗಳೂರು. ೧-೪

ಜೀವನ ಚರಿತ್ರ ಲೇಖಕರಾದ ಇವರು ಇಲ್ಲಿ ಭರತ ಹನುಮಂತರ ಕಥೆ ಹೇಳಿದ್ದಾರೆ.

೬ ಕಾದಂಬರಿಗಳು

ಐತಿಹಾಸಿಕ

ಕರ್ಮಯೋಗಿ — **ಶಿವರುದ್ರಪ್ಪ, ಜಿ. ಎಸ್.**

ಶಾರದಾ ಮಂದಿರ, ಮೈಸೂರು. ೧-೮

ರಾಘವಾಂಕನಿಂದ ಪ್ರೇರಿತರಾಗಿ, ಸಿದ್ಧರಾಮನ ಭಾವಚಿತ್ರವನ್ನು ಸ್ವತಂತ್ರ ಕಥಾನಕವೆಂಬಂತೆ ರಚಿಸಿದ್ದಾರೆ.

ಕಲ್ಯಾಣಸ್ವಾಮಿ — **ಕುಳಕುಂದ, ಶಿವರಾವ**

ಮೋಹನ ಪ್ರಕಾಶನ, ಮೈಸೂರು. ೧-೮

೧೨೫ ವರ್ಷಗಳ ಹಿಂದೆ ಕೊಡಗಿನ ಕಲ್ಯಾಣಸ್ವಾಮಿಯು ಬ್ರಿಟಿಶರ ವಿರುದ್ಧ ಬಂಡೆಬ್ಬಿಸಿದನು. 'ನಿರಂಜನ'ರ ಪ್ರಥಮ ಐತಿಹಾಸಿಕ ಕೃತಿ.

ಕಲೋಪಾಸಕರು — **ಸುಬ್ರಮಣ್ಯಶಾಸ್ತ್ರಿ, ಬಸವರಾಜ**

ಜೀವನ ಕಾರ್ಯಾಲಯ, ಬೆಂಗಳೂರು. ೧-೪

ಕಳೆದ ಶತಮಾನದಲ್ಲಿ, ಮೈಸೂರು ಆಸ್ಥಾನದಲ್ಲಿಯ ಕಲಾಪೋಷಣೆಯ ಬಗೆಯನ್ನು ಚಿತ್ರಿಸುತ್ತದೆ.

ಗಿರಿಯ ನವಿಲು — **ಕಟ್ಟೀಮನಿ, ಬಸವರಾಜ**

ಶಾರದಾ ಪ್ರಕಟನಾಲಯ, ಬೆಂಗಳೂರು. ೧-೮

ಅಕ್ಕ ಮಹಾದೇವಿಯ ಜೀವನವನ್ನು ಕುರಿತ ಕಾದಂಬರಿ.

ಚಂದ್ರಿಕೆಯ ಚೆಲುವಿನಲ್ಲಿ — **ಉದಯಶಂಕರ, ಕೆ.**

ಸುಧಾ ಪ್ರಕಾಶನ, ಬೆಂಗಳೂರು. ೧-೮

ವೀರ ಕುಣಾಲನ ಕಥೆ ಇದರಲ್ಲಿದೆ.

ಚಿಕವೀರ ರಾಜೇಂದ್ರ — **ವೆಂಕಟೇಶ ಅಯ್ಯಂಗಾರ್, ಮಾಸ್ತಿ**

ಜೀವನ ಕಾರ್ಯಾಲಯ, ಬೆಂಗಳೂರು. ೬-೮

ಕೊಡಗಿನ ಕೊನೆಯ ರಾಜನಾದ ಕಥಾನಾಯಕನು ತನ್ನ ಅವಿಚಾರದ ಫಲವಾಗಿ ರಾಜ್ಯವನ್ನು ಕಳೆದುಕೊಂಡದ್ದರ ಕಥೆ ಇದು. ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ' ಮುಖ್ಯ ವಸ್ತುವನ್ನು ಒದಗಿಸಿದೆ.

ರೂಪಲೇಖಾ — **ಪುಟ್ಟಸ್ವಾಮಯ್ಯ, ಬಿ.**

ಶಾರದಾ ಪ್ರಕ., ಬೆಂಗಳೂರು. ೧-೧೨

ವಿಜಯನಗರದ ಪ್ರೌಢದೇವರಾಯನ ಧೀರ, ಉದಾತ್ತ ಚಿತ್ರಣ.

ವಿಷ ಕನ್ಯೆ — **ಬೆಳ್ಳಿಕಲಮುದಾನಿ, ರಾಘವೇಂದ್ರ**

ಗಳಗನಾಥ ಸುರಸ ಗ್ರಂಥಮಾಲೆ, ಹಾವೇರಿ. ೨-೦

ಔರಂಗಜೇಬನ ಕಾಲದ ಕಥಾನಕವಿದು.

ಸಮರ ಭೂಮಿ — **ಕಟ್ಟೀಮನಿ, ಬಸವರಾಜ**

ಶಾರದಾ ಪ್ರಕ., ಬೆಂಗಳೂರು. ೧-೮

ನರಗುಂದ ಬಂಡಾಯದ ಸಮಗ್ರ ವಸ್ತುವಿನ ಕಾದಂಬರಿ.

ಸಿಡಿಲು ಮೊಗ್ಗು — **ಸುಬ್ಬರಾಯ, ತ. ರಾ.**

ನವ್ಯ ಸಾಹಿತ್ಯ ಪ್ರಕಾಶನ, ಮೈಸೂರು. ೨-೦

ತ. ರಾ. ಸು. ಅವರ ಈ ರಜತೋತ್ಸವ ಕಾದಂಬರಿಯು ವಿಶಿಷ್ಟ ರೀತಿಯಲ್ಲಿ ಪ್ರಕಟವಾಗಿದೆ. ಹೊಯ್ಸಳೇಶ್ವರ ವಿಷ್ಣುವರ್ಧನನ ಎಳವರೆಯದ ಜೀವನವು ಚಿತ್ರಿತವಾಗಿದೆ.

ಹೊಯ್ಸಳೇಶ್ವರ ವಿಷ್ಣುವರ್ಧನ — **ಸುಬ್ಬರಾಯ, ತ. ರಾ.**

ಜಿ. ಕೆ. & ಬ್ರದರ್ಸ, ಬೆಂಗಳೂರು. ೧-೪

ಇಲ್ಲಿ ಹೊಯ್ಸಳ ದೊರೆಯು ತಲಕಾಡನ್ನು ಗೆದ್ದ ಸಂದರ್ಭವಿದೆ.

ಸಾಮಾಜಿಕ-ರಾಜಕೀಯ

ಅಪಜಯ — **'ತ್ರಿವೇಣಿ'**

ಡಿ. ವಿ. ಕೆ. ಮೂರ್ತಿ, ಬೆಂಗಳೂರು. ೧-೮

'ಅಪಸ್ವರ' ಕಾದಂಬರಿಯ ಮೀರೆಯು ಮೆಡಿಕಲ್ ಕಾಲೇಜ ಸೇರಿದ ಕಥೆ.

ಈಚಲ ಮರದವ್ವ — **ಕೃಷ್ಣರಾಯ, ಅ. ನ.**

ಸ್ಟ್ಯಾಂಡರ್ಡ ಬುಕ್ ಡಿಪೋ, ಬೆಂಗಳೂರು. ೧-೮

ಕುಡಿತದ ದುಷ್ಪರಿಣಾಮವನ್ನು ಬಿಡಿಸಿ ತೋರಿಸುತ್ತದೆ.

ಎರಡು ಹೆಣ್ಣು, ಒಂದು ಗಂಡು — ಸುಬ್ಬರಾಯ, ತ. ರಾ.

ಮೋಹನ ಪ್ರಕಾಶನ, ಮೈಸೂರು. ೧-೮

'ನಾಗರ ಹಾವು' ಕಾದಂಬರಿಯ ಮುಂದಿನ ಕಥೆ.

ಕಟ್ಟಿದ ಬಣ್ಣ — ಕೃಷ್ಣರಾಯ, ಅ. ನ.

ಸ್ಟ್ಯಾಂಡರ್ಡ ಬುಕ್ ಡಿಪೋ, ಬೆಂಗಳೂರು. ೧-೮

ಸಂಗೀತ ಪ್ರಪಂಚದ ವಾಸ್ತವಾಂಶದ ಚಿತ್ರಣ.

ಕನಸಿನ ಕಡೆ — ಜಯಲಕ್ಷ್ಮಿ, ಎಂ. ಕೆ.

ಸುಧಾ ಪ್ರಕಾಶನ, ಬೆಂಗಳೂರು. ೧-೮

ಲೇಖಿಕೆಯ ಪ್ರಥಮ ಕೃತಿ. ಹೆಣ್ಣುಮಕ್ಕಳ ಹಾಸ್ಟೆಲ್ ಜೀವನವಿದೆ.

ಕನ್ಯಾ ಸೆರೆ — 'ಉಷಾದೇವಿ'

ಅಶೋಕ ಸಾಹಿತ್ಯ, ಬೆಂಗಳೂರು. ೧-೮

ಮಲ ಮಕ್ಕಳ ಕಷ್ಟದ ಬದುಕನ್ನು ಚಿತ್ರಿಸುತ್ತದೆ.

ಕಲಾ ಸಾರ್ವಭೌಮ — ವೆಂಕಟೇಶ ವಿಠಲ, ಸಿ. ಆರ್.

ಎಸ್. ಎಸ್. ಎನ್. ಬುಕ್ ಡಿಪೋ, ಬೆಂಗಳೂರು. ೧-೪

ಬಲದೇವನೆಂಬ ಯುವಕನ ನಾಟ್ಯಕಲಾ ಸೇವೆಯು ವರ್ಣಿತವಾಗಿದೆ.

ಕಳಾ ಪ್ರಪೂರ್ಣ — ಚೆನ್ನಬಸವೇಶ್ವರ, ಸಿ. ವ.

ಸಾಧನಾ ಪ್ರಕಾಶನ, ಹೈದರಾಬಾದ. ೧-೮

ಕಥಾ ನಾಯಕನು ವೃತ್ತಿಯಲ್ಲಿ ಒಕ್ಕಲಿಗ; ಪ್ರವೃತ್ತಿಯಿಂದ ಕಲಾವಿದ.

ಕಾಮ ಕುಂಡದಲ್ಲಿ — ಕಿದಿಯೂರ, ಹ. ರಾ.

ಕನ್ನಡ ಸಾಹಿತ್ಯ ಪ್ರಕಾಶನ, ಬೆಂಗಳೂರು. ೦-೧೨

ಒಂದು ರಶಿಯನ್ ಕಾದಂಬರಿಯ ನೆರಳಿನಲ್ಲಿ ರಚಿತವಾದ ಕೃತಿ.

ಕಾವೇರಿ — ಚಡಗ, ಎಸ್.

ಶ್ರೀ ಪ್ರಕಾಶನ, ಬೆಂಗಳೂರು. ೧-೮

ಶಾಲಾ ಮಾಸ್ತರನ ಹೆಂಡತಿ ಪಾರ್ವತಿಯ ತ್ಯಾಗದ ಕಥೆ.

ಕುಲವಧು — ಪುರಾಣಿಕ, ಕೃಷ್ಣಮೂರ್ತಿ

ಪ್ರಸಾದ ಪಬ್ಲಿಕೇಶನ್ಸ, ಮೈಸೂರು. ೧-೮

ಕೊನೇ ನಮಸ್ಕಾರ — ಕುಳಕುಂದ, ಶಿವರಾವ

ವಿದ್ಯಾನಿಧಿ ಪ್ರಕಾಶನ, ಮೈಸೂರು. ೧-೮

ಸಾರ್ವಜನಿಕ ಕಾರ್ಯಕರ್ತೆಯಾದ ಪುಟ್ಟವ್ವನ ಚಟುವಟಿಕೆಗಳ ನಿರೂಪಣೆ.

ಗರ್ಭದಿಂದ ಗೋರಿಗೆ — 'ಸ್ವಪ್ನಜೀವಿ'

ಗೀತಾ ಏಜನ್ಸೀಸ್, ಬೆಂಗಳೂರು. ೦-೯

ಚಕ್ರತೀರ್ಥ — ಸುಬ್ಬರಾಯ, ತ. ರಾ.

ಗಾಯತ್ರಿ ಸಾಹಿತ್ಯಮಾಲೆ, ಮೈಸೂರು. ೧-೮

ತನ್ನ ತವರಿನವರು ಗಂಡನನ್ನು ಅನಾದರದಿಂದ ಕಂಡಿದ್ದರಾದ್ದರಿಂದ, ಕಮಲಮ್ಮ ತನ್ನ ತಮ್ಮನಿಗೆ ಮಗಳನ್ನು ಕೊಡುವುದಿಲ್ಲವೆಂದಳು.

ಚಲೋ ಗೋವಾ — ರಾಣೆ, ವಾಸುದೇವ

ಶಾಂತವೀರ ಪ್ರಕಾಶನ, ಕಲಘಟಗಿ. ೦-೧೫

ಗೋವೆಯ ಪಾರ್ಶ್ವ ಭೂಮಿಯ ಚಿತ್ರಣದ ರಾಜಕೀಯ ಕಾದಂಬರಿ.

ಜಯಂತಿ — ಅನಂತನಾರಾಯಣ, ಎಸ್.

ಗಾಯತ್ರಿ ಸಾಹಿತ್ಯಮಾಲೆ, ಮೈಸೂರು. ೧-೮

ತಬ್ಬಲಿಯೂ ವಿದ್ಯಾವಂತೆಯೂ ಆದ ಜಯಂತಿಯು ವಿಧಿ ಲೀಲೆಯಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು.

ಜಾತಕ ಪಕ್ಷಿ — ಕೃಷ್ಣರಾಯ, ಅ. ನ.

ಅಶೋಕ ಸಾಹಿತ್ಯ, ಬೆಂಗಳೂರು ೧-೮

ಮಿಶ್ರ ವಿವಾಹ ಸಮಸ್ಯೆಯನ್ನು ಎತ್ತಿಕೊಂಡ ಕಾದಂಬರಿ.

ಜೀವನ ಚಕ್ರ — ವೆಂಕೋಬರಾವ, ಪಿ.

ಗಾಂಧೀ ಸಾಹಿತ್ಯ ಸಂಘ, ಬೆಂಗಳೂರು. ೧-೪

ಸರ್ವರ ಹಿತದಲ್ಲಿ ತನ್ನ ಹಿತವಿದೆ ಎಂಬ ತತ್ವವನ್ನು ಆಚರಿಸ ಹೊರಟ ಶ್ರೀನಿವಾಸನ ಈ ಕತೆಯಲ್ಲಿ ಸರ್ವೋದಯ, ಭೂದಾನ ವಿಚಾರಗಳಿವೆ.

ತವರು ಮನೆ — ಹುಂಡೇಕಾರ, ಸೂಗಣ್ಣ

ಜಯಲಕ್ಷ್ಮೀ ಪ್ರಕಟನಾಲಯ, ಯಾದಗಿರಿ. ೮-೮

ತವರಿನಲ್ಲಿಯೂ ನೆಮ್ಮದಿ ದೊರೆಯದ ಉಷೆಯ ಕಥೆ.

ತುಂಗಮ್ಮನ ತವರುಮನೆ — ವೆಂಕಟರಾಜ, ಎಸ್.

ಶ್ರೀಕೃಷ್ಣ ಪ್ರಕಾಶನ, ಉಡುಪಿ. ೦-೧೪

ದೀಕ್ಷೆ — ಕುಳಕುಂದ, ಶಿವರಾವ

ವಿಶಾಲ ಸಾಹಿತ್ಯ ಪ್ರಕಾಶನ, ಮೈಸೂರು. ೧-೦

ಕನ್ನಡ ಪತ್ರಿಕೋದ್ಯಮವನ್ನು ಹಿನ್ನೆಲೆಯಾಗಿಟ್ಟುಕೊಂಡ ಕಾದಂಬರಿ.

ದೀಪ ದರ್ಶನ — ' ದಿನೇಶ್ '

ಸುಧಾ ಪ್ರಕಾಶನ, ಬೆಂಗಳೂರು. ೧-೪

ಸರಕಾರೀ ಆಸ್ಪತ್ರೆಯಲ್ಲಿ, ನರ್ಸ ಮತ್ತು ರೋಗಿಯ ಪ್ರಣಯ ಕಥೆ.

ದೀಪ ನಿರ್ವಾಣ — ಕೊಟ್ಟಲಗಿ, ರಾಮಚಂದ್ರ

ಲಲಿತ ಸಾಹಿತ್ಯಮಾಲೆ, ಧಾರವಾಡ. ೧-೮

ವಿದ್ಯಾವಂತ ಮಹಿಳೆ ಡಾ. ಅನುಪಾ ತನ್ನ ಜೀವನದ ವ್ಯಥೆಯನ್ನು ದಿನಚರಿಯ ರೂಪದಲ್ಲಿ ಹೇಳಿದಂತೆ ರಚಿತವಾದ ಕಾದಂಬರಿ.

ದೇವ ದಾನವರು — ಸೀತಾರಾಮ, ಕೋ. ಸು.

